ವಿಜಯಪುರ | ಸಂಪುಟ 04 | ಸಂಚಿಕೆ 204 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಮಂಗಳವಾರ, ಅಕ್ಟೋಬರ್, 06, 2026



"ರಾಜ್ಯದಲ್ಲಿ ಭೀಕರ ಬರಗಾಲ ಇದೆ. 150 ವರ್ಷಗಳಲ್ಲೇ ಅತಿ ದೊಡ್ಡ ಭೀಕರ ಬರ ಇದಾಗಿದೆ. 220 ತಾಲೂಕು ಈ ಹೊಡೆತಕ್ಕೆ ಸಿಲುಕಿವೆ. ಇಂತಹ ಪರಿಸ್ಥಿತಿಯಿದ್ದರೂ ಗ್ಯಾರಂಟಿ ಯೋಜನೆಯಿಂದ ನಮ್ಮ ರಾಜ್ಯದ ಜನ ನೆಮ್ಮದಿಯಿಂದ ಇರಲು ಸಾಧ್ಯವಾಗಿದೆ."

■ ಸಿದ್ದರಾಮಯ್ಯ
ಮಾಜಿ ಮುಖ್ಯಮಂತ್ರಿ



## ಮಿಣಜಗಿ ಗ್ರಾಮದೆಡೆಗೆ ಬಸ್ ಸಂಚಾರಕ್ಕೆ ಆಗ್ರಹಿಸಿ ಮನವಿ

■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ಬಸ್ ಘಟಕದಿಂದ ಮಿಣಜಗಿ ಗ್ರಾಮದ ಮಾರ್ಗವಾಗಿ ಮುದ್ದೇಬಿಹಾಳಕ್ಕೆ ಸಂಚರಿಸುತ್ತಿದ್ದ ಸಾರಿಗೆ ಬಸ್‌ಗಳು ಮತ್ತು ಮುದ್ದೇಬಿಹಾಳದಿಂದ ತಾಳಿಕೋಟೆಗೆ ಆಗಮಿಸುವ ಬಸ್ಸುಗಳು ಇದೀಗ ಮಿಣಜಗಿ ಮಾರ್ಗವನ್ನು ಬದಲಿಸಿ ಹಡಗಿನಾಳ ಮಾರ್ಗವಾಗಿ ಸಂಚರಿಸುತ್ತಿರುವುದರಿಂದ ಗ್ರಾಮಸ್ಥರಿಗೆ ತೀವ್ರ ಅನಾನುಕೂಲ ಉಂಟಾಗುತ್ತಿದೆ. ಈ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಿ ಮಿಣಜಗಿ ಮಾರ್ಗದೆಡೆಗೆ ಬಸ್ ಸಂಚಾರ ಪುನಃ ಮುಂದುವರಿಸುವಂತೆ ಆಗ್ರಹಿಸಿ ಮಿಣಜಗಿ ಗ್ರಾಮಸ್ಥರು ಸೋಮವಾರರಂದು ಬಸ್ ಘಟಕ ವ್ಯವಸ್ಥಾಪಕ ಪಿ.ಕೆ. ಜಾಧವ ಅವರಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಗ್ರಾಮ ಮುಖಂಡ ವೀರೇಶ ಬಾಗೇವಾಡಿ ಮಾತನಾಡಿ, ಮಿಣಜಗಿ ಗ್ರಾಮವು ಪ್ರಮುಖ ಉದ್ಯೋಗ ಕೇಂದ್ರವಾಗಿದ್ದು, ಪ್ರತಿದಿನ ನೂರಾರು ಕೂಲಿ ಕಾರ್ಮಿಕರು ವಿವಿಧ ಗ್ರಾಮಗಳಿಂದ ಇಲ್ಲಿಗೆ ಕೆಲಸಕ್ಕಾಗಿ ಆಗಮಿಸುತ್ತಾರೆ. ಬಸ್‌ಗಳ ಮಾರ್ಗ ಬದಲಾವಣೆಯಿಂದ ಕಾರ್ಮಿಕರು ಮಾತ್ರವಲ್ಲದೆ ಮಿಣಜಗಿಯಿಂದ ತಾಳಿಕೋಟೆ ಪಟ್ಟಣಕ್ಕೆ ತೆರಳುವ ವಿದ್ಯಾರ್ಥಿಗಳು, ಮಹಿಳೆಯರು, ವೃದ್ಧರು ಹಾಗೂ ಉದ್ಯೋಗಸ್ಥರು ತೀವ್ರ ತೊಂದರೆ ಅನುಭವಿಸುವಂತಾಗಿದೆ ಎಂದು ಹೇಳಿದರು.

ಈ ಕುರಿತು ಈಗಾಗಲೇ ಸಾರಿಗೆ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಸೂಕ್ತ ಸ್ಪಂದನೆ ದೊರೆತಿಲ್ಲ. ಅಲ್ಲದೆ, ವಿಜಯಪುರದಿಂದ ತಾಳಿಕೋಟೆಗೆ ಸಂಚರಿಸುವ ಬಸ್‌ಗಳು ಮಿಣಜಗಿ ಕ್ರಾಸ್‌ನಲ್ಲಿ ನಿಲುಗಡೆ ನೀಡದಿರುವುದರಿಂದ ಸುತ್ತಮುತ್ತಲಿನ ಗ್ರಾಮಗಳಿಂದ ಮಿಣಜಗಿಗೆ ಕೆಲಸಕ್ಕಾಗಿ ಬರುವ ಕೂಲಿ ಕಾರ್ಮಿಕರಿಗೂ ತೊಂದರೆಯಾಗುತ್ತಿದೆ. ಆದ್ದರಿಂದ ಮಿಣಜಗಿ ಮಾರ್ಗದಲ್ಲಿ ಬಸ್ ಸಂಚಾರ ಪುನರಾರಂಭಿಸುವುದು ಹಾಗೂ ಮಿಣಜಗಿ ಕ್ರಾಸ್‌ನಲ್ಲಿ ಬಸ್‌ಗಳಿಗೆ ನಿಲುಗಡೆ ಕಲ್ಪಿಸುವುದು ಸೇರಿದಂತೆ ಎರಡೂ ಸಮಸ್ಯೆಗಳನ್ನು ಶೀಘ್ರ ಪರಿಹರಿಸಬೇಕು ಎಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಘಟಕ ವ್ಯವಸ್ಥಾಪಕ ಪಿ.ಕೆ. ಜಾಧವ ಅವರು, ಮಿಣಜಗಿ ಗ್ರಾಮಸ್ಥರು ಬಸ್ ನಿಲುಗಡೆ ಹಾಗೂ ಮಾರ್ಗದ ಸಮಸ್ಯೆ ಕುರಿತು ಮನವಿ ಸಲ್ಲಿಸಿದ್ದಾರೆ. ಈಗಾಗಲೇ ಈ ಕುರಿತು ಕ್ರಮ ಕೈಗೊಳ್ಳುವಂತೆ ಸಂಚಾರ ನಿಯಂತ್ರಕರಿಗೆ ಸೂಚನೆ ನೀಡಿದ್ದು, ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಅಗತ್ಯಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮದ ಪ್ರಮುಖರಾದ ಸಂಗನಗೌಡ ಪಾಟೀಲ, ಐ.ವಾಯ್. ಹಿರೇಮಠ, ಎ.ಎಸ್. ಬಿರಾದಾರ, ಎಂ.ಜೆ. ಪಾಟೀಲ, ಕೆ.ಎ. ಪಾಟೀಲ, ಸಿ.ಎಂ. ಸಜ್ಜನ, ಐ.ಎಂ. ಯಾಳವಾರ, ಶರಣಗೌಡ ಬಿರಾದಾರ, ಈರಣ್ಣ ಮದರಿ, ಸೋಮು ನಾಯ್ಕೋಡಿ, ಎಂ.ಆರ್. ಅಕ್ಕಿ, ಬಿ.ಹೆಚ್. ಬಶೆಟ್ಟಿ, ಕೆ. ಎಂ. ಹಗರಟಗಿ, ರಾಮು ಜಂಬಗಿ, ಮಹಾಂತೇಶ ಮಂಗ್ಯಾಳ, ಶಿವು ಮಡಿಕೇಶ್ವರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

2028 ರಲ್ಲಿ ನಮಗೇ ಗೆಲುವು ಖಚಿತ | ಸಿಎಂ ಯಾರೆಂದು ನಂತರ ತೀರ್ಮಾನ | ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಹೇಳಿಕೆ

# ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ

ಕಲಬುರಗಿ: ರಾಜ್ಯದಲ್ಲಿ ಮುಂಬರುವ ಎಲ್ಲಾ ಚುನಾವಣೆಗಳನ್ನು ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಮಾಡಿಕೊಂಡು ಒಗ್ಗಟ್ಟಾಗಿ ಎದುರಿಸಲಿವೆ, 2028ರ ವಿಧಾನಸಭೆ ಚುನಾವಣೆಯಲ್ಲಿ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಪಕ್ಷದ ಅಭ್ಯರ್ಥಿ ಶಶಿಲ್ ನಮೋಶಿ ನಾಮಪತ್ರ ಸಲ್ಲಿಕೆ ಹಿನ್ನಲೆಯಲ್ಲಿ ಇಂದು ಕಲಬುರಗಿಗೆ ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ರಾಜ್ಯದ ಕಾಂಗ್ರೆಸ್ ಸರ್ಕಾರದ ಆಡಳಿತದಿಂದ ಜನರು ಬೇಸತ್ತಿದ್ದು, ಬದಲಾವಣೆಯನ್ನು ಬಯಸುತ್ತಿದ್ದಾರೆ. ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಸರ್ಕಾರ ವಿಫಲವಾಗಿದ್ದು, ಆಡಳಿತ ವೈಫಲ್ಯದಿಂದ ಜನರಲ್ಲಿ ಅಸಮಾಧಾನ ಹೆಚ್ಚಾಗಿದೆ ಎಂದು ಆರೋಪಿಸಿದರು.

ಹೆಚ್.ಡಿ.ಕುಮಾರಸ್ವಾಮಿ ಅವರು ಮೈತ್ರಿ ಸರ್ಕಾರದ ಮುಂದಿನ ಸಿಎಂ ಅಭ್ಯರ್ಥಿ ಎನ್ನುವ ವಿಚಾರ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿದ ಅವರು, ಬಿಜೆಪಿ-ಜೆಡಿಎಸ್ ಮೈತ್ರಿ ಕೂಟ ಅಧಿಕಾರಕ್ಕೆ ಬರಲಿ, ನಮ್ಮ ಗಮನವೆಲ್ಲ ಸದ್ಯಕ್ಕೆ ಆ ಕಡೆಯಿದೆ.



ವಿಧಾನಸಭೆ ಚುನಾವಣೆ ಬಳಿಕ ಯಾರು ಸಿಎಂ ಆಗಬೇಕು ಎಂಬುವುದರ ತೀರ್ಮಾನವಾಗುತ್ತದೆ. ಚುನಾವಣೆ ಬಳಿಕ ಯಾರು ಸಿಎಂ ಎಂಬುದು ಈಗಾಗಲೇ ವಿಜಯೇಂದ್ರ ಸ್ಪಷ್ಟಪಡಿಸಿದ್ದಾರೆ. ಮೊದಲು ಚುನಾವಣೆಯನ್ನು ಎದುರಿಸುತ್ತೇವೆ. ನಮ್ಮ ಬಳಿ ಬಿಜೆಪಿ ಜೆಡಿಎಸ್ ಎರಡು ಒಂದೆ ಎಂಬ ಅಭಿಪ್ರಾಯವಿದೆ. ಸಿಎಂ ಯಾರಾಗಬೇಕು ಎನ್ನುವುದು ನಂತರ ತೀರ್ಮಾನವಾಗುತ್ತದೆ ಎಂದರು 2028 ರಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಸಿಎಂ ಡಿಕೆ ಶಿವಕುಮಾರ್ ಭ್ರಮೆಯಲ್ಲಿದ್ದಾರೆ ಇರಲಿ, ಅವರ ಭ್ರಮೆಗೆ ನಮ್ಮ ಅಭ್ಯಂತರವೇನೂ ಇಲ್ಲ. ಹಣ ಹೆಂಡ ಬಲದ ಮೇಲೆ ಚುನಾವಣೆಯಲ್ಲಿ ಗೆಲ್ಲುವ ಕಾಲ ಹೋಗಿದೆ. ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಈ ಸರ್ಕಾರಕ್ಕೆ ಪಾಠ ಕಲಿಸಬೇಕು ಅಂದ್ರೆ ಈ ಚುನಾವಣೆಯಲ್ಲಿ ಸೋಲಿಸಬೇಕಿದೆ. ಈ ರಾಜ್ಯದ ಮತದಾರರು ಜಾಗ್ರತರಾಗಿದ್ದಾರೆ. ಬರುವ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆದು ರಾಜ್ಯದಲ್ಲಿ ಮೈತ್ರಿ ಸರ್ಕಾರ ನಡೆಸುತ್ತೇವೆ ಎಂದು ಹೇಳಿದರು.

### ಪೈಲೆಟ್ ಸ್ಮಿತ್ ಗೆ ಭಾರತ ರತ್ನ ಕೊಡಬೇಕು

ನಮ್ಮ ದೇಶದ ಹೆಮ್ಮೆಯ ಪೈಲೆಟ್ ಸ್ಮಿತ್ 172 ಜನರ ರಕ್ಷಣೆ ಮಾಡಿದ್ದಾರೆ. ಸ್ಮಿತ್ ಅವರಿಗೆ ಭಾರತ ರತ್ನ ಕೊಡಬೇಕು ಅಂತಾ ಪ್ರಧಾನಿಯವರಿಗೆ ರಾಷ್ಟ್ರಪತಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ ಎಂದು ಯಡಿಯೂರಪ್ಪ ಹೇಳಿದರು

ವಾರಬಂದಿ ಪದ್ಧತಿ ರದ್ದುಪಡಿಸಿ ನಿರಂತರ ನೀರು ಕೊಡದಿದ್ದರೆ ರೈತ ಸಂಘಟನೆಗಳಿಂದ ಉಗ್ರ ಹೋರಾಟದ ಎಚ್ಚರಿಕೆ

## ಕಾಲುವೆಗಳಿಗೆ ನಿರಂತರ ನೀರು ಹರಿಸಲು ಆಗ್ರಹಿಸಿ ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ




ಆಲಮಟ್ಟಿ: ಬರಗಾಲದ ನಡುವೆ ಬಿತ್ತನೆ ಮಾಡಿದ ಬೆಳೆ ಉಳಿಸಲು ಮುಳವಾಡ ಮತ್ತು ಚಿಮ್ಮಲಗಿ ಏತ ನೀರಾವರಿಯ ಎಲ್ಲ ಕಾಲುವೆಗಳಿಗೆ ಕೂಡಲೇ ನೀರು ಹರಿಸಬೇಕು. ವಾರಬಂದಿ ಪದ್ಧತಿ ರದ್ದುಪಡಿಸಿ ನಿರಂತರ ನೀರು ಕೊಡಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ರೈತ ಸಂಘಟನೆಗಳು ಎಚ್ಚರಿಕೆ ನೀಡಿವೆ.

ಸೋಮವಾರ ಆಲಮಟ್ಟಿಯಲ್ಲಿ ಅಖಂಡ ಕರ್ನಾಟಕ ರೈತ ಸಂಘ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಜಂಟಿಯಾಗಿ ಪ್ರತಿಭಟನೆ ನಡೆಸಿದವು. ರಾಮಲಿಂಗೇಶ್ವರ ದೇವಸ್ಥಾನದಿಂದ ಮೆರವಣಿಗೆ ಹೊರಟ ರೈತರು ಕೆಬಿಜೆಎನ್‌ಎಲ್ ಮುಖ್ಯ ಅಭಿಯಂತರರ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ್ ಕುಲಕರ್ಣಿ ಹಾಗೂ ಜಿಲ್ಲಾಧ್ಯಕ್ಷ ನಿಂಗರಾಜ್ ಆಲೂರ, "ಮುಂಗಾರು ಮಳೆ ಸಂಪೂರ್ಣ ಕೈಕೊಟ್ಟಿದೆ. ತೊಗರಿ, ಶೇಂಗಾ, ಮೆಕ್ಕೆಜೋಳ, ಹತ್ತಿ ಬೆಳೆಗಳು ನೀರಿಲ್ಲದೆ ಕಮರಿ ಹೋಗುತ್ತಿವೆ. ಜಲಾಶಯದಲ್ಲಿ 103.315 ಟಿಎಂಸಿ ನೀರಿದ್ದು, ಬಳಕೆಗೆ 85.695 ಟಿಎಂಸಿ ಲಭ್ಯವಿದೆ. ಆದ್ದರಿಂದ ಮಂಗಳವಾರದಿಂದಲೇ ಎಲ್ಲ ಕಾಲುವೆಗಳಿಗೆ ನೀರು ಹರಿಸಬೇಕು. ಆಲಮಟ್ಟಿ ಜಲಾಶಯದಿಂದ ನಾರಾಯಣಪುರ ಜಲಾಶಯಕ್ಕೆ ನೀರು ಹರಿಸಬಾರದು" ಎಂದು ಆಗ್ರಹಿಸಿದರು.

ಉಪ ಮುಖ್ಯ ಅಭಿಯಂತರ ಐ.ಎಲ್. ಕಳಸ ಮನವಿ ಸ್ವೀಕರಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ವಿಠ್ಠಲ ಬಿರಾದಾರ್, ತಾಲೂಕು ಅಧ್ಯಕ್ಷರಾದ ನಿಂಗರಾಜ್ ನಿಡಗುಂದಿ, ಸೀತಪ್ಪ ಗಣಿ, ಬಸವರಾಜ್ ಬಾಗೇವಾಡಿ ಸೇರಿದಂತೆ ನೂರಾರು ರೈತರು ಭಾಗವಹಿಸಿದ್ದರು.

### ಅಧಿಕಾರಿಗಳ ಭರವಸೆ

ಪ್ರತಿಭಟನೆ ಬಳಿಕ ಮಾತನಾಡಿದ ಅಧೀಕ್ಷಕ ಅಭಿಯಂತರ ಬಿ.ಎಸ್. ಪಾಟೀಲ್, ಸೋಮವಾರವೇ ಅಧಿಕಾರಿಗಳ ಸಭೆ ನಡೆಸಿ ಮಂಗಳವಾರ ಸಂಜೆಯಿಂದ ಎಲ್ಲ ಕಾಲುವೆಗಳಿಗೆ ನೀರು ಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.



## ಶಾಸಕರ ಭರವಸೆ: ರೈತರ ಅಮರಣ ಉಪವಾಸ ಅಂತ್ಯ

■ ಉದಯರಶ್ಮಿ ದಿನಪತ್ರಿಕೆ

ತಡವಲಗಾ ಗ್ರಾಮದಲ್ಲಿ ಭಾರತೀಯ ಕಿಸಾನ್ ಸಂಘದ ವತಿಯಿಂದ ನಡೆಯುತ್ತಿರುವ ಅಮರಣ ಉಪವಾಸ ಸತ್ಯಾಗ್ರಹ

ಇಂಡಿ: ತಾಲೂಕಿನ ತಡವಲಗಾ ಗ್ರಾಮದ ಜೋಡಗುಡಿ ಹತ್ತಿರ ಭಾರತೀಯ ಕಿಸಾನ್ ಸಂಘದ ವತಿಯಿಂದ ನಡೆಯುತ್ತಿರುವ ಅಮರಣ ಉಪವಾಸ ಸತ್ಯಾಗ್ರಹ ಸ್ಥಳಕ್ಕೆ ಶಾಸಕರಾದ ಯಶವಂತರಾಯಗೌಡ ಪಾಟೀಲ ಅವರು ತಮ್ಮ ಎಲ್ಲ ಇಲಾಖೆಗಳ ಅಧಿಕಾರಿಗಳ ಜೊತೆ ಅಮರಣ ಉಪವಾಸ ಸ್ಥಳಕ್ಕೆ ಬಂದು ಉಪವಾಸ ಕುಳಿತ ಗುರುನಾಥ ಬಗಲಿ ಹಾಗೂ ಚಂದಪ್ಪ ಜೆಟೆಪ್ಪ ಮಿರಗಿ ಅವರಿಗೆ ಎಳೆ ನೀರು ಕುಡಿಸುವದರ ಮೂಲಕ ಹೋರಾಟವನ್ನು ಅಂತ್ಯಗೊಳಿಸಿದರು.

ಶಾಸಕ ಯಶವಂತರಾಯಗೌಡ ಪಾಟೀಲರು ಮಾತನಾಡಿ, ನಾನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಯ ಕಮಿಟಿ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಅವರೊಂದಿಗೆ ಮಾತುಕತೆ ಮಾಡಿ ಹಾಗೂ ಈಗ ಕೃಷ್ಣಾ ಮೇಲ್ದಂಡೆ ಯೋಜನೆಯ ಮುಖ್ಯ ಅಭಿಯಂತರ ಬಸವರಾಜ ಅವರನ್ನು ಕರೆದುಕೊಂಡು ಬಂದಿದ್ದೇನೆ. ಕೇವಲ ಏಳು ದಿನಗಳ ಒಳಗಾಗಿ ಇಂಡಿ ತಾಲೂಕಿನ ತಡವಲಗಾ ಗ್ರಾಮದ ಕೆರೆ ಸೇರಿದಂತೆ ಇಂಡಿ ಹಾಗೂ ಚಡಚಣ ತಾಲೂಕಿನ ಎಲ್ಲಾ ಕೆರೆಗಳನ್ನು ತುಂಬಿಸಲಾಗುವದು. ಒಂದು ವೇಳೆ ತುಂಬಿಸದಿದ್ದರೆ ನಾನೇ ಸ್ವತಃ ಬಂದು ನಿಮ್ಮ ಜೊತೆ ಹೋರಾಟ ಮಾಡುತ್ತೇನೆ. ನನ್ನ ಮೇಲೆ ನಂಬಿಕೆ ಇಡಿ ಎಂದರು.

ತಡವಲಗಾದ ರಾಚೋಟೇಶ್ವರ ಶ್ರೀಗಳು ಮಾತನಾಡಿ, ಈ ಬಾರಿ ಭೀಕರ ಬರಗಾಲದಿಂದ ರೈತರು ಕಂಗಾಲಾಗಿದ್ದಾರೆ. ಕೆರೆಗಳಿಗೆ ನೀರು ಹರಿಸದಿದ್ದರೆ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ತಲೆದೊರುತ್ತದೆ ಎಂದರು.

ಕಂದಾಯ ಉಪವಿಬಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ತಹಸೀಲ್ದಾರ ನಾಗೇಂದ್ರ ಕೋಳಶೆಟ್ಟಿ ಇಒ ಮಹಾದೇವಪ್ಪ ಏವೂರ, ಡಿವಾಯ್‌ಎಸ್‌ಪಿ ಸದಾಶಿವ ಕಟ್ಟಿಮನಿ ಹೊರ್ತಿ ಪಿಎಸ್‌ಐ ಅನಿತಾ ರಾಠೋಡ ಗ್ರಾಮದ ಮುಖಂಡರಾದ ಬಸವರಾಜ ಇಂಡಿ, ಬಾಬು ಸಾಹುಕಾರ ಮೇತ್ರಿ ಆನಂದಪ್ಪ ದೇಸಾಯಿ,ಸೋಮಶೇಖರ ಬ್ಯಾಳಿ, ತಮ್ಮಣ್ಣ ಪೂಜಾರಿ ಮಲ್ಲನಗೌಡ ಪಾಟೀಲ, ಈರಪ್ಪ ಗೊಟ್ಯಾಳ ಸೋಮಶೇಖರ ಬ್ಯಾಳಿ ನಾಗಪ್ಪ ಮಕಣಿ ಚನ್ನಪ್ಪ ಮಿರಗಿ ಅಂಬಣ್ಣ ಪಂತೋಜಿ ಮತ್ತಿತರಿದ್ದರು.



15 ವರ್ಷಗಳಿಂದ ಕಾಯಕಲ್ಪ ಕಾಣದ ಕೈಗಾಇಳಕಲ್ ರಾಜ್ಯ ಹೆದ್ದಾರಿ; ತಗ್ಗು-ಗುಂಡಿ, ಜಲ್ಲಿಕಲ್ಲು ಮತ್ತು ಧೂಳಿನಿಂದ ನರಳುತ್ತಿರುವ ವಾಹನ ಸವಾರರು. ಹೆದ್ದಾರಿ ಮರುನಾಮಕರಣಕ್ಕಿಂತ ಅಭಿವೃದ್ಧಿಗೆ ಆದ್ಯತೆ ನೀಡಿ, ಕೋಟ್ಯಂತರ ಅನುದಾನ ತಂದು ರಸ್ತೆ ದುರಸ್ತಿಗೆ ಜನಪ್ರತಿನಿಧಿಗಳು ಮುಂದಾಗಬೇಕಿದೆ.

## 371ಜೆ ವ್ಯಾಪ್ತಿಗೆ ಸೇರ್ಪಡೆಗೊಳಿಸಲು ಪ್ರಾಮಾಣಿಕ ಪ್ರಯತ್ನ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ ಜಿಲ್ಲೆಯನ್ನು 371ಜೆ ಸ್ಥಾನಮಾನಕ್ಕೆ ಸೇರ್ಪಡೆಗೊಳಿಸಲು ಸಿಂದಗಿಯಲ್ಲಿ ನಡೆಯುತ್ತಿರುವ ಉಪವಾಸ ಸತ್ಯಾಗ್ರಹ | ಸಂಸದ ಜಿಗಜಿಣಗಿ ಭರವಸೆ

ಸಿಂದಗಿ: ವಿಜಯಪುರ ಜಿಲ್ಲೆಯನ್ನು 371ಜೆ ವಿಶೇಷ ಸ್ಥಾನಮಾನಕ್ಕೆ ಸೇರ್ಪಡೆಗೊಳಿಸಬೇಕೆಂಬ ಆಗ್ರಹದೊಂದಿಗೆ ಸಿಂದಗಿ ನಗರದ ಬಸವೇಶ್ವರ ವೃತ್ತದಲ್ಲಿ ಕಳೆದ ಮೂರು ದಿನಗಳಿಂದ ನಡೆಯುತ್ತಿದ್ದ ಉಪವಾಸ ಸತ್ಯಾಗ್ರಹವನ್ನು ಕೈಬಿಟ್ಟು, ಧರಣಿ ಸತ್ಯಾಗ್ರಹ ಮುಂದುವರಿಸುವಂತೆ ಸಂಸದ ರಮೇಶ ಜಿಗಜಿಣಗಿ ಮನವಿ ಮಾಡಿದರು.

ಸಿಂದಗಿ ಬಸವೇಶ್ವರ ವೃತ್ತದಲ್ಲಿ ಗೋಕಾಕ ಚಳುವಳಿಯ ರೂವಾರಿ ಶ್ರೀ ರೇಚ ರೇವಡಿಗಾರ ಪ್ರತಿಷ್ಠಾನ ಹಾಗೂ ಸಿಂದಗಿ 371ಜೆ ಹೋರಾಟ ಸಮಿತಿಯ ನೇತೃತ್ವದಲ್ಲಿ ನಡೆಯುತ್ತಿದ್ದ ಉಪವಾಸ ಸತ್ಯಾಗ್ರಹ ಸ್ಥಳಕ್ಕೆ ಸೋಮವಾರ ಭೇಟಿ ನೀಡಿದ ಅವರು, ಹೋರಾಟಗಾರರೊಂದಿಗೆ ಮಾತನಾಡಿ, ವಿಜಯಪುರ ಜಿಲ್ಲೆಯನ್ನು 371ಜೆ ವ್ಯಾಪ್ತಿಗೆ ಸೇರ್ಪಡೆಗೊಳಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಕೆಲವು ವರ್ಷಗಳ ಹಿಂದೆ ಹೈದರಾಬಾದ್ ಕರ್ನಾಟಕ ಭಾಗಕ್ಕೆ 371ಜೆ ಸೌಲಭ್ಯ ಕಲ್ಪಿಸುವಂತೆ ನಡೆದ ಹೋರಾಟದ ಫಲವಾಗಿ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸೌಲಭ್ಯ ದೊರೆತಿದೆ. ಆದರೆ ವಿಜಯಪುರ ಜಿಲ್ಲೆಯನ್ನು ಅದರಿಂದ ಹೊರಗಿಟ್ಟಿರುವುದು ದುರಂತ. ಈ ಭಾಗಕ್ಕೂ ಸೌಲಭ್ಯ ದೊರೆಯಬೇಕೆಂಬ ಬೇಡಿಕೆ ನ್ಯಾಯಯುತವಾಗಿದೆ ಎಂದು ಅವರು ಹೇಳಿದರು.

ವಿಜಯಪುರ ಜಿಲ್ಲೆಯ ಎಲ್ಲ ಶಾಸಕರು ಹಾಗೂ ಸಚಿವರ ಮೂಲಕ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಸಮಗ್ರ ಪ್ರಸ್ತಾವನೆ ಸಲ್ಲಿಸುವಂತೆ ಕ್ರಮ ಕೈಗೊಳ್ಳಬೇಕು. ಅಗತ್ಯ ದಾಖಲೆಗಳನ್ನು ಸಿದ್ಧಪಡಿಸಿ ರಾಜ್ಯ ಸರ್ಕಾರದ ಮೂಲಕ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದರೆ, ಸಂಸತ್ತಿನಲ್ಲಿ ಈ ಕುರಿತು ಚರ್ಚಿಸಿ ವಿಜಯಪುರ ಜಿಲ್ಲೆಯನ್ನು 371ಜೆ ವ್ಯಾಪ್ತಿಗೆ ಸೇರ್ಪಡೆಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಹೋರಾಟದ ರೂವಾರಿ ಹಾಗೂ ಪ್ರತಿಷ್ಠಾನದ ಸಂಚಾಲಕ ರಂಘನಾಥ ತೋರ್ಫೆ ಮಾತನಾಡಿ, ಡಾ. ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ಇಂಡಿ, ಸಿಂದಗಿ, ತಾಳಿಕೋಟಿ, ಮುದ್ದೇಬಿಹಾಳ ಹಾಗೂ ಬಸವನಬಾಗೇವಾಡಿ ಸೇರಿದಂತೆ ಈ ಭಾಗದ ತಾಲೂಕುಗಳು ಹಿಂದುಳಿದಿರುವ ಕುರಿತು ದಾಖಲೆಗಳಿವೆ. ರಜಾಕರ ಹಾವಳಿಯಿಂದ ಈ ಭಾಗದ ಜನರು ಮನೆ-ಮಠ ಕಳೆದುಕೊಂಡು ಸಂಕಷ್ಟ ಅನುಭವಿಸಿದ್ದರೆ, ಹಲವರು ಪ್ರಾಣ ಕಳೆದುಕೊಂಡಿದ್ದಾರೆ. ಈ ಐತಿಹಾಸಿಕ ಹಾಗೂ ಹಿಂದುಳಿದ ಪರಿಸ್ಥಿತಿಯ ಆಧಾರದ ಮೇಲೆ ವಿಜಯಪುರ ಜಿಲ್ಲೆಗೂ 371ಜೆ ಸೌಲಭ್ಯ ಕಲ್ಪಿಸಬೇಕಾಗಿದೆ ಎಂದು ಒತ್ತಾಯಿಸಿದರು.

ಈ ವೇಳೆ ಮಾಜಿ ವಿಪ ಸದಸ್ಯ ಅರುಣ ಶಹಾಪುರ ಮಾತನಾಡಿ, ಹೈದರಾಬಾದ್ ಕರ್ನಾಟಕ 371ಜೆ ಹೋರಾಟದ ಸಂದರ್ಭದಲ್ಲಿ ಜನಪ್ರತಿನಿಧಿಗಳು ಹಾಗೂ ಈ ಭಾಗದ ಜನರ ಇಚ್ಛಾಶಕ್ತಿಯ ಕೊರತೆಯಿಂದ ವಿಜಯಪುರ ಜಿಲ್ಲೆಗೆ ಸೌಲಭ್ಯ ದೊರೆಯಲಿಲ್ಲ. ಆದರೆ ಬ್ರಿಟಿಷರ ವರದಿ ಹಾಗೂ ಡಾ. ನಂಜುಂಡಪ್ಪ ವರದಿಯಲ್ಲಿ ಈ ಭಾಗ ಹಿಂದುಳಿದಿರುವುದಕ್ಕೆ ದಾಖಲೆಗಳಿವೆ. ರಾಜ್ಯ ಸರ್ಕಾರವು ಈ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಕೇಂದ್ರ ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಿದಾಗ ಮಾತ್ರ ಹೋರಾಟಕ್ಕೆ ನ್ಯಾಯ ಸಿಗಲಿದೆ ಎಂದರು. ಹೋರಾಟಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಯಂಕಂಚಿ ಕುಂಟೋಜಿ ಹಿರೇಮಠದ ರುದ್ರಮುನಿ ಶಿವಾಚಾರ್ಯರು, ಮಾಜಿ ಶಾಸಕ ರಮೇಶ ಭೂಸನೂರ, ಬಿಜೆಪಿ ಮಂಡಲ ಅಧ್ಯಕ್ಷ ಸಂತೋಷ ಪಾಟೀಲ ಡಂಬಳ, ಸುರೇಶಗೌಡ ಬಿರಾದಾರ, ನ್ಯಾಯವಾದಿ ದಾನಪ್ಪಗೌಡ ಚನ್ನಗೊಂಡ, ರೈತ ಸಂಘದ ಮುಖಂಡ ಸಿದ್ರಾಮ ರಂಜುಣಗಿ, ರವಿಗೌಡ ಪೀರಶೆಟ್ಟಿ, ಗುರುರಾಜ ಪಡಶೆಟ್ಟಿ, ಈರಣ್ಣಗೌಡ ಬಿರಾದಾರ, ಎಂ.ಎಂ.ಹಂಗರಗಿ, ಶಿವಾನಂದ ಕಲಬುರ್ಗಿ ಮಾತನಾಡಿದರು. ಸಿದ್ದರಾಮ ಪಾಟೀಲ, ಅಶೋಕ ವಾರದ, ಸಾಯಬಣ್ಣ ದೇವರಮನಿ, ಸಂಗಣ್ಣ ಬ್ಯಾಕೋಡ, ಶೈಲಜಾ ಸ್ಥಾವರಮಠ, ಶಾಮಲಾ ಮಂದೇವಾಲಿ, ಆನಂದ ಶಾಬಾದಿ, ಪಂಡಿತ ಯಂಪೂರೆ, ಸಿದ್ದು ಕಡಗಂಚಿ ಸೇರಿದಂತೆ ಅನೇಕ ನಾಗರಿಕರು ಉಪಸ್ಥಿತರಿದ್ದರು.

# ಕಣ್ಣಂಚಿನ ಕಣ್ಣಾಮುಚ್ಚಾಲೆಯಲ್ಲಿ ಪ್ರೇಮದ ಬೆಸುಗೆ




ಜಯಶ್ರೀ.ಜೆ. ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ ಮೊ:9449234142

■ ಉದಯರಶ್ಮಿ ದಿನಪತ್ರಿಕೆ

ನನ್ನ ಉಸಿರಿನ ಒಡತಿಗೆ, ಹೃದಯದ ಭಾಷೆಗೆ ಅಕ್ಷರಗಳ ರೂಪ ಕೊಡುವುದು ಎಷ್ಟು ಕಷ್ಟವೋ, ನಿನ್ನ ಮೇಲಿರುವ ಪ್ರೀತಿಯನ್ನು ಪದಗಳಲ್ಲಿ ಹಿಡಿದಿಡುವುದು ಅಷ್ಟೇ ಅಸಾಧ್ಯ. ಆದರೂ, ನನ್ನ ಒಂಟಿ ಜಗತ್ತಿಗೆ ಬೆಳಕಾಗಿ ಬಂದ ನಿನಗಾಗಿ, ನಮ್ಮ ಪ್ರೇಮಕಾವ್ಯದ ಪುಟಗಳನ್ನು ಒಮ್ಮೆ ತಿರುವಿ ಹಾಕುತ್ತಿದ್ದೇನೆ.

ಅಂದು ಆ ಕಿಕ್ಕಿರಿದು ತುಂಬಿದ್ದ ಬಸ್ ನಿಲ್ದಾಣ... ನಿನ್ನನ್ನು ಮೊದಲ ಬಾರಿಗೆ ನೋಡಿದ ಆ ಕ್ಷಣ ಇಂದಿಗೂ ನನ್ನ ಕಣ್ಣುಗಳಲ್ಲೇ ಹಸಿರಾಗಿದೆ. ನೀನು ಅಪರಿಚಿತಳಾಗಿ ಬಂದು ನನ್ನ ಪ್ರಪಂಚವನ್ನೇ ಬದಲಾಯಿಸಿಬಿಟ್ಟೆ. ನೀಲಿ ಬಣ್ಣದ ರೇಷ್ಮೆ ಸೀರೆಯುಟ್ಟು, ಅದಕ್ಕೆ ಹೊಂದುವ ಜರಿ ಬ್ಲೌಸ್ ಧರಿಸಿದ ನಿನ್ನ ಆ ರೂಪ ದೇವಲೋಕದ ಅಪ್ಸರೆಯಂತೆ ಕಂಗೊಳಿಸುತ್ತಿತ್ತು. ಆ ಸುರುಳಿ ಮುಂಗುರುಳಿನ ಸೌಂದರ್ಯ, ಬಿಲ್ಲು ಹಚ್ಚಿದಂತಿದ್ದ ಹುಬ್ಬುಗಳು, ಮತ್ತು ನಕ್ಷತ್ರಗಳನ್ನೇ ಹೋಲುವ ನಿನ್ನ ಆ ನೀಲ ಗಗನದಂತಹ ಕಣ್ಣುಗಳು ನನ್ನನ್ನು ಮಂತ್ರಮುಗ್ಧನಾಗಿಸಿದ್ದವು. ಗುಲಾಬಿ ದಳಗಳಂತಿದ್ದ ತುಟಿಗಳು, ನುಣುಪಾದ ಕೆನ್ನೆಗಳು, ಮತ್ತು ಆ ಸುಂದರ



ಗಲ್ಲದ ಕೆಳಗೆ ಮಿನುಗುತ್ತಿದ್ದ ನಿನ್ನ ಆ ಸಣ್ಣನೆಯ ಕಪ್ಪುಮಚ್ಚೆ, ಸಣಕಲು ಸಣ್ಣನೆ ಸೊಂಟ ನನ್ನ ಎದೆಯಲ್ಲಿ ಪ್ರೇಮದ ತರಂಗಗಳನ್ನೇ ಎಬ್ಬಿಸಿತ್ತು. ಕೈಯಲ್ಲಿದ್ದ ಬಳೆಗಳ ನಾದ ಮತ್ತು ಕೊರಳಿನ ಸಾಂಪ್ರದಾಯಿಕ ಒಡವೆಗಳು ನಿನ್ನ ಅಂದಕ್ಕೆ ಹೊಸ ಮೆರುಗನ್ನು ನೀಡಿದ್ದವು.

ನಿನ್ನನ್ನು ನೋಡುತ್ತಿದ್ದ ನನ್ನ ಮುಖದಲ್ಲೂ ಒಂದು ಆಕರ್ಷಕ ಕಳೆಯಿತ್ತು. ಅಚ್ಚುಕಟ್ಟಾಗಿ ಕತ್ತರಿಸಿದ ರೇಷ್ಮೆಯಂತಹ ಕೂದಲು ಮತ್ತು ಗಂಡುತನದ ಗತ್ತನ್ನು ಹೆಚ್ಚಿಸುವಂತೆ ಸವರಿದ್ದ ನನ್ನ ಆ ದಟ್ಟವಾದ ಮೀಸೆ, ಜೀನ್ಸ್ ಪ್ಯಾಂಟ್, ಕಡುಗಪ್ಪು ಶರ್ಟ್ ಧರಿಸಿ, ಕಣ್ಣಿಗೆ ಗಾಗಲ್ಸ್ ಏರಿಸಿ ನಿಂತಿದ್ದ ನನ್ನ ಆ ಸ್ಟೈಲಿಶ್ ಲುಕ್ ಮತ್ತು ಕೈಗೆ ಕಟ್ಟಿದ್ದ ರಗಡ್ ವಾಚ್ ನಿನ್ನ ಕಣ್ಣುಗಳನ್ನೂ ನನ್ನತ್ತ ಸೆಳೆಯುವಂತೆ ಮಾಡಿತ್ತು ಅಲ್ವಾ?

ನಮ್ಮಿಬ್ಬರ ಕಣ್ಣುಗಳು ಮೊದಲ ಬಾರಿಗೆ ಸಂಧಿಸಿದಾಗ ಇಡೀ ಜಗತ್ತೇ ಒಂದು ಕ್ಷಣ ಸ್ತಬ್ಧವಾದಂತಾಗಿತ್ತು. ಆ ತೀಕ್ಷ್ಣ ನೋಟದ ಚಕಮಕಿಂ-ುಲ್ಲಿ ಮಾತುಗಳಿಗಿಂತ ಭಾವನೆಗಳೇ ಹೆಚ್ಚು ಮೌನವಾಗಿ ಸಂವಹನ ನಡೆಸಿದವು. ನಂತರ ಪ್ರೀತಿಯ ಆ ಆರಂಭಿಕ ಅಳುಕಿನಿಂದಾಗಿ, ಒಬ್ಬರನ್ನೊಬ್ಬರು ಕದ್ದುಮುಚ್ಚಿ ನೋಡುವ ಆ ಸೌಂದರ್ಯವೇ ಅದ್ಭುತವಾಗಿತ್ತು. ನಾನು ನೋಡುವುದು ನಿನಗೆ ತಿಳಿಯುತ್ತಿದ್ದಂತೆ ನೀನು ನಾಚಿ ತಲೆತಗ್ಗಿಸುವುದು, ಮತ್ತೆ ನೀನು ಕಣ್ಣೆತ್ತಿ ನೋಡುವಾಗ ನಾನು ಬೇರೆಡೆ ಮುಖ ತಿರುಗಿಸುವ ನಮ್ಮಿಬ್ಬರ ಪ್ರೇಮದ ಕಣ್ಣಾಮುಚ್ಚಾಲೆ ಆ ಅಪರಿಚಿತ ಭೇಟಿಗೆ ಹೊಸ ಮೆರುಗನ್ನು ನೀಡಿತ್ತು. ನೀನು ನನ್ನನ್ನು ನೋಡಿದ ಆ ಒಂದು ಕ್ಷಣ, ನಾವಿಬ್ಬರು ಒಬ್ಬರಿಗೊಬ್ಬರಿಗಾಗಿಯೇ ಹುಟ್ಟಿದವರು ಎಂಬ ಅನುಭೂತಿ ನನ್ನ ಇಡೀ ಜೀವಾತ್ಮಕ್ಕೆ ತಟ್ಟಿತ್ತು.

ನಿನ್ನ ಆ ಮೊದಲ ಭೇಟಿಯ ನಂತರ ನಾನಂತೂ ನನ್ನ ನಿಯಂತ್ರಣದಲ್ಲೇ ಇರಲಿಲ್ಲ. ಆಫೀಸಿನಲ್ಲಿ ಕಂಪ್ಯೂಟರ್ ಪರದೆಯತ್ತ ನೋಡುತ್ತಿದ್ದರೆ ಅಲ್ಲಿ ನಿನ್ನದೇ ಮುಖ ಮೂಡಿಬರುತ್ತಿತ್ತು. ಗೆಳೆಯರೆಲ್ಲ ಗಂಭೀರವಾಗಿ ಮಾತನಾಡುತ್ತಿದ್ದರೆ, ನಾನು ಮಾತ್ರ ಗಲ್ಲಕ್ಕೆ ಕೈಕೊಟ್ಟು, ನೀನು ಬಸ್ ಹತ್ತುವಾಗ ನಿನ್ನ ಮುಂಗುರುಳು ಗಾಳಿಗೆ ತೇಲುತ್ತಿದ್ದ ಆ ಸುಂದರ ದೃಶ್ಯವನ್ನು ಹಗಲುಗನಸು ಕಾಣುತ್ತಾ ಕುಳಿತಿರುತ್ತಿದ್ದೆ. ಕಾಫಿ ಕಪ್ ಹಿಡಿದರೆ ಅದರಲ್ಲಿ ನಿನ್ನ ಕಣ್ಣುಗಳ ಪ್ರತಿಬಿಂಬ! ಈ ನನ್ನ ಹಗಲುಗನಸುಗಳ ಹುಚ್ಚುತನವನ್ನು ಕಂಡು ನನ್ನ ಗೆಳೆಯರಂತೂ ನನ್ನನ್ನು ಕಾಡದೇ ಬಿಡುತ್ತಿರಲಿಲ್ಲ. "ನಮ್ಮ ಗಂಭೀರ ಸಿಂಹ ಇಷ್ಟು ಬೇಗ ಪ್ರೀತಿಯ ಬಲೆಯಲ್ಲಿ ಬಿದ್ದು ಬೆಕ್ಕಾಗಿಯೇ ಹೋಯಿತಲ್ಲ!" ಎಂದು ಸಿಕ್ಕಸಿಕ್ಕಾಗಲೆಲ್ಲಾ ಕಾಲೆಳೆಯುತ್ತಿದ್ದರು. ರಾಣಿ ಅಂತ ತಾವೇ ನಿನಗೆ ಹೆಸರಿಟ್ಟರು. ನಿನ್ನ ಹೆಸರೇಳಿ ಅವರು ಚುಡಾಯಿಸುವಾಗಲೆಲ್ಲಾ ನನ್ನ ಮುಖದಲ್ಲಿ ಮೂಡುತ್ತಿದ್ದ ಆ ಕಳ್ಳನಗು ನನ್ನ ಗೆಳೆಯರಿಗೆ ದೊಡ್ಡ ಹಬ್ಬವಾಗಿರುತ್ತಿತ್ತು.



ವಿಧಿಯ ಆಟ ಎಷ್ಟು ಅದ್ಭುತ ಅಲ್ವಾ? ಅದೇ ಕಾಕತಾಳೀಯ ಎಂಬಂತೆ ನಾವು ಮತ್ತೆ ಸುಂದರ ಉದ್ಯಾನವನದಲ್ಲಿ ಮುಖಾಮುಖಿಯಾದೆವು. ಸುತ್ತಲೂ ಹಸಿರಿನ ಹಾಸಿಗೆ, ತಂಗಾಳಿಗೆ ತೂಗುತ್ತಿದ್ದ ಹೂವುಗಳು, ಚಿಲಿಪಿಲಿಗುಟ್ಟುತ್ತಿದ್ದ ಹಕ್ಕಿಗಳು... ಎಲ್ಲವೂ ನಮ್ಮ ಭೇಟಿಯನ್ನೇ ಸಂಭ್ರಮಿಸುತ್ತಿರುವಂತಿತ್ತು. ಉದ್ಯಾನವನದಲ್ಲಿದ್ದ ಜನರು ತಮ್ಮದೇ ಪ್ರಪಂಚದಲ್ಲಿದ್ದರೆ, ನನ್ನ ಕಣ್ಣುಗಳು ಮಾತ್ರ ಕೇವಲ ನಿನ್ನನ್ನೇ ಹುಡುಕುತ್ತಿದ್ದವು. ಆ ಪ್ರಕೃತಿಯ ಮಡಿಲಿನಲ್ಲಿ, ಇನ್ನು ತಡೆಯಲಾರದೆ ನನ್ನ ಹೃದಯದ ಗೂಡಿನಲ್ಲಿದ್ದ ಪ್ರೀತಿಯನ್ನು ನಿನ್ನ ಮುಂದೆ ಬಿಚ್ಚಿಟ್ಟೆ. ನೀನು ಏನೂ ಮಾತನಾಡದೆ, ನಿನ್ನ ಕೆನ್ನೆಗಳು ಕೆಂಪಾಗುತ್ತಿರಲು, ನಾಚಿಕೆಯಿಂದ ತಲೆ ತಗ್ಗಿಸಿ ಮೌನವಾಗಿಯೇ ನನ್ನ ಪ್ರೀತಿಯನ್ನು ಒಪ್ಪಿಕೊಂಡ ಆ ಕ್ಷಣ ನನ್ನ ಬದುಕಿನ ಅತ್ಯಂತ



ಖುಷಿಯ ಕ್ಷಣ. ನಮ್ಮ ಈ ಪ್ರೇಮದ ವಿಷಯ ನಿನ್ನ ಗೆಳತಿಯರಿಗೂ ತಿಳಿದಾಗ, ಅವರೂ ನಿನ್ನನ್ನು ಬಿಡಲಿಲ್ಲ. "ಅಪರಿಚಿತನಿಗೆ ಹೃದಯ ಕೊಟ್ಟು ಬಂದೆಯಾ?" ಎಂದು ನಿನ್ನ ಕೈ ಹಿಡಿದು ಎಳೆಯುತ್ತಾ, ನನ್ನ ಹೆಸರನ್ನು ನಿನ್ನ ಕಿವಿಯಲ್ಲಿ ಪಿಸುಗುಟ್ಟುತ್ತಾ ನಿನ್ನ ಮುಖದ ಮೇಲಿನ ನಾಚಿಕೆಯನ್ನು ದುಪ್ಪಟ್ಟು ಮಾಡುತ್ತಿದ್ದರು.

ನಂತರ ನಮ್ಮ ಪ್ರೇಮದ ಪಯಣ ಮತ್ತೊಂದು ಹಂತಕ್ಕೆ ತಲುಪಿತು. ನಗರದ ಗಿಜಿಗುಟ್ಟುವ ಗದ್ದಲದಿಂದ ದೂರ, ಪ್ರಶಾಂತವಾದ ಆ ಹೊರವಲಯದ ನಿರ್ಜನ ಜಾಗದಲ್ಲಿ ನಮ್ಮ ಮುಂದಿನ ಭೇಟಿ ನಿಶ್ಚಯವಾಗಿತ್ತು. ಅಲ್ಲಿ ಪ್ರಕೃತಿಯ ಮೌನ ಮಾತ್ರ ನಮಗೊಂದು ಆಸರೆಯಾಗಿತ್ತು. ಅಲ್ಲಿ ನಾವಿಬ್ಬರೂ ಹತ್ತಿರ ಬಂದಾಗ, ನನ್ನ ಕೈಗಳು ನಿನ್ನ ಮೃದುವಾದ ಹಸ್ತವನ್ನು ಮೊದಲ ಬಾರಿಗೆ ಸ್ಪರ್ಶಿಸಿದವು. ಆ ಮೊದಲ ಸ್ಪರ್ಶದಲ್ಲಿ ನನ್ನ ಇಡೀ ದೇಹದಲ್ಲಿ ಮಿಂಚು ಹರಿದಂತಾಗಿತ್ತು. ನಿನ್ನ ಮೃದುವಾದ ಉಸಿರು ನನ್ನ ಕೆನ್ನೆಗೆ ತಾಗುತ್ತಿರಲು, ನಿನ್ನ ಹೆಗಲ ಮೇಲೆ ನನ್ನ ಕೈಯಿಟ್ಟು, ನಿನ್ನ ಮುಖವನ್ನು ಹತ್ತಿರಕ್ಕೆಳೆದು ನಿನ್ನ ಹಣೆಗೊಂದು ಕೆನ್ನೆಗೆರಡು ಮೃದುವಾದ ಮುತ್ತಿಕ್ಕಿದ ಆ ಹಗುರ ಪ್ರಣಯದ ಕ್ಷಣಗಳು ಇಂದಿಗೂ ನನ್ನನ್ನು ರೋಮಾಂಚನಗೊಳಿಸುತ್ತವೆ.

ಅಲ್ಲಿಂದ ಶುರುವಾಗಿದ್ದು ನಮ್ಮ ಪ್ರೇಮ ಸಂದೇಶಗಳ ಸರಮಾಲೆ. ಹಗಲು-ರಾತ್ರಿ ಎನ್ನದೆ ಮೊಬೈಲ್ ಪರದೆಯ ಮೇಲೆ ನಿನ್ನ ಪ್ರೀತಿಯ ಮೆಸೇಜ್‌ಗಳಿಗಾಗಿ ಕಾಯುವುದೇ ಒಂದು ಮಧುರ ಹವ್ಯಾಸವಾಗಿಹೋಯಿತು. ಪ್ರತಿಯೊಂದು ಶಬ್ದದಲ್ಲೂ ನಿನ್ನ ಪ್ರೀತಿ, ನಿನ್ನ ಮುನಿಸು, ನಿನ್ನ ಕಾಳಜಿ ನನಗೆ ಸ್ಪಷ್ಟವಾಗಿ ಕಾಣಿಸುತ್ತಿತ್ತು.

ನಾವು ಅನುಭವಿಸಿದ ಆ ನಿಜವಾದ ಪ್ರೀತಿ ಕೇವಲ ಆಕರ್ಷಣೆಯಾಗಿರಲಿಲ್ಲ; ಅದು ಎರಡು ಆತ್ಮಗಳು ಒಂದಕ್ಕೊಂದು ಬೆಸೆದುಕೊಂಡ ಅಲೌಕಿಕ ಅನುಭೂತಿ. ನಿನ್ನ ಕಣ್ಣುಗಳ ನಿಶ್ಯಬ್ದ ಪ್ರಪಂಚದಲ್ಲಿ ನನ್ನ ಇಡೀ ಅಸ್ತಿತ್ವಕ್ಕೆ ನೆಮ್ಮದಿಯ ತಂಗಾಳಿ ಬೀಸಿದಂತಾಗಿತ್ತು. ಮೌನದಲ್ಲೂ ಪ್ರತಿಯೊಂದು ಭಾವನೆಯನ್ನು ಗ್ರಹಿಸುವ, ಮಾತಿಲ್ಲದೆಯೇ ಮನದ ಆಳವನ್ನು ಅರಿಯುವ ಆ ಅದ್ಭುತ ಶಕ್ತಿ ನಮಗೆ ಆ ನಿಜವಾದ ಪ್ರೀತಿಯಿಂದಲೇ ಲಭಿಸಿತು. ನಮ್ಮ ಹುಸಿ ಮುನಿಸು, ಆ ಮುನಿಸಿನ ನಂತರದ ಅತಿಯಾದ ಕಾಳಜಿ, ಪ್ರತಿಯೊಂದು ಕಷ್ಟದಲ್ಲೂ ಹೆಗಲಾಗಿ ನಿಲ್ಲುವ ಆ ಭರವಸೆ ಇವೆಲ್ಲವೂ ನಮ್ಮ ಪ್ರೀತಿಯನ್ನು ಜಗತ್ತಿನ ಅತ್ಯಂತ ಪವಿತ್ರವಾದ ಭಾವನೆಯನ್ನಾಗಿ ಪರಿವರ್ತಿಸಿತು. ಈ ಪ್ರೇಮವು ನನ್ನನ್ನು ಹೆಚ್ಚು ಜವಾಬ್ದಾರಿಯುತನನ್ನಾಗಿ ಮತ್ತು



ನಿನ್ನನ್ನು ನನ್ನ ಬದುಕಿನ ಪರಮ ಸತ್ಯವನ್ನಾಗಿ ಮಾಡಿದೆ.

ಬಸ್ ನಿಲ್ದಾಣದ ಆ ಅಪರಿಚಿತ ಭೇಟಿಯಿಂದ ಆರಂಭವಾದ ನಮ್ಮ ಈ ಪಯಣ, ಇಂದು ಜೀವನದ ಅತಿ ದೊಡ್ಡ ನಿರ್ಧಾರಕ್ಕೆ ಬಂದು ನಿಂತಿದೆ. ನನ್ನ ಬದುಕಿನ ಪ್ರತಿಯೊಂದು ಏಳುಬೀಳುಗಳಲ್ಲೂ, ನನ್ನ ಉಸಿರಿನ ಕೊನೆಯವರೆಗೂ ನಿನ್ನ ಜೊತೆಯಾಗಿ, ನಿನ್ನ ಕೈ ಹಿಡಿದು ಮುನ್ನಡೆಯಲು ನಾನು ಸಂಪೂರ್ಣವಾಗಿ ಸಿದ್ಧನಾಗಿದ್ದೇನೆ. ನಿನ್ನನ್ನು ನನ್ನ ಅರ್ಧಾಂಗಿನಿಯನ್ನಾಗಿ, ನನ್ನ ಸಂಸಾರದ ದೇವತೆಯನ್ನಾಗಿ ಬರಮಾಡಿಕೊಳ್ಳುವ ಆ ಶುಭ ಘಳಿಗೆಗಾಗಿ ನನ್ನ ಹೃದಯ ಬಡಿತ ಕ್ಷಣಕ್ಷಣವೂ ಕಾಯುತ್ತಿದೆ.

ಜನ್ಮಜನ್ಮಕ್ಕೂ ನಿನ್ನವನೇ ಆಗಿರುವ,
ನಿನ್ನ ಪ್ರೀತಿಯ ಹುಡುಗ.



## ನಿವೃತ್ತ ಯೋಧ 'ಶಿವಾನಂದ ಪೂಜಾರಿ'ಗೆ ಅದ್ಧೂರಿ ಸ್ವಾಗತ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: "ದೇಶ ರಕ್ಷಣೆ ಮಾಡುವ ಸೈನಿಕರು ಕಣ್ಣಿಗೆ ಕಾಣುವ ನಿಜವಾದ ದೇವರು' ಎಂದು ಶಾಸಕ ರಾಜುಗೌಡ ಪಾಟೀಲ (ಕುದರಿಸಾಲವಾಡಗಿ) ಹೇಳಿದರು.

ತಾಲ್ಲೂಕಿನ ಚಿಕ್ಕರೂಗಿ ಗ್ರಾಮದಲ್ಲಿ ಶುಕ್ರವಾರ ಭಾರತೀಯ ಸೇನೆಯಲ್ಲಿ 17 ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿ, ಗ್ರಾಮಕ್ಕೆ ಮರಳಿದ ಯೋಧ ಶಿವಾನಂದ ಮಡ್ಡಪ್ಪ ಪೂಜಾರಿ ಅವರ ಸ್ವಾಗತ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ತಮ್ಮ ಕುಟುಂಬದ ಬಗ್ಗೆ ಚಿಂತಿಸದೇ ದೇಶ ರಕ್ಷಣೆಗಾಗಿ ಸೇವೆ ಸಲ್ಲಿಸುತ್ತಿರುವ ಭಾರತೀಯ ಸೈನಿಕರ ಸೇವೆ ನಿಜಕ್ಕೂ ಶ್ಲಾಘನೀಯ ಎಂದರು.

ಮಾಜಿಶಾಸಕ ಸೋಮನಗೌಡ ಪಾಟೀಲ(ಸಾಸನೂರ) ಮಾತನಾಡಿ, ರೈತ ಮತ್ತು ಯೋಧ ಇವರು ದೇಶದ ಎರಡು ಕಣ್ಣುಗಳಿದ್ದಂತೆ, ರೈತ ಈ ಮಣ್ಣಲ್ಲಿ ಬೆಳೆ ಬೆಳೆಯಲಿಲ್ಲವೆಂದರೆ ಮಣ್ಣು ತಿನ್ನಬೇಕಾಗುತ್ತದೆ, ಯೋಧ ಈ ಮಣ್ಣನ್ನು ಕಾಯಲಿಲ್ಲ ಅಂದರೆ ಮಣ್ಣು ಸೇರಬೇಕಾಗುತ್ತದೆ ಎಂದು ಮಾರ್ಮಿಕವಾಗಿ ಹೇಳಿದರು.

ನಿವೃತ್ತ ಯೋಧ ಶಿವಾನಂದ ಮಾತನಾಡಿ, ಯೋಧರಿಗೆ ಸಾರ್ವಜನಿಕರು ನೀಡುವ ಗೌರವವನ್ನು ನೋಡಿದರೆ ಸೈನಿಕಸೇವೆ ಬಗ್ಗೆ ಅತ್ಯಂತ ಹೆಮ್ಮೆ ಎನಿಸುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ನಿವೃತ್ತ ಯೋಧನನ್ನು ದೇವರಹಿಪ್ಪರಗಿ ಅಂಬೇಡ್ಕರ್ ವೃತ್ತದಿಂದ ಗ್ರಾಮದವರೆಗೆ ಸಾರೋಟದಲ್ಲಿ ಮೆರವಣಿಗೆ ಮೂಲಕ ಯುವಕರು ಸ್ವಾಗತಿಸಿದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಸಂಗಯ್ಯ ಹಿರೇಮಠ, ಅಧ್ಯಕ್ಷತೆಯನ್ನು ಅಶೋಕಗೌಡ ಪಾಟೀಲ ವಹಿಸಿದ್ದರು.

ಅಜೀತ ಬಿರಾದಾರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾ ಪಂಚಾಯಿತಿ ಮಾಜಿಸದಸ್ಯರಾದ ಗೌರಮ್ಮ ಮುತ್ತತ್ತಿ, ಲಕ್ಷ್ಮಣ ಅಂಗಡಿ, ಪಿಕೆಪಿಎಸ್ ಅಧ್ಯಕ್ಷ ನಾಗಣ್ಣ ಮುಳಜಿ, ವಿಜಯಪುರ ಅನುಗ್ರಹ ಆಸ್ಪತ್ರೆಯ ವಿಶ್ವನಾಥ ಪಾಟೀಲ, ದತ್ತಾತ್ರೇಯ ಹೊಸಮಠ, ದೇವರಹಿಪ್ಪರಗಿ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ರಮೇಶ ಮಸಬಿನಾಳ, ಕರವೇ ಜಿಲ್ಲಾಧ್ಯಕ್ಷ ಶ್ರೀಶೈಲ ಮುಳಜಿ, ಮಾಜಿಸೈನಿಕರ ಸಂಘದ ಜಿಲ್ಲಾಧ್ಯಕ್ಷ ರಾಮಪ್ಪ.ಎಲ್.ಕೆ, ತಾಲ್ಲೂಕು ಅಧ್ಯಕ್ಷ ರಾಮು ಭಜಂತ್ರಿ, ಸಿದ್ದಗೊಂಡಪ್ಪಗೌಡ ಪಾಟೀಲ, ಸದಾಶಿವ ಕರ್ಜಗಿ, ಸಿದ್ದನಗೌಡ ಬಿರಾದಾರ, ಅಡಿವೆಪ್ಪ ಕೊಂಡಗೂಳಿ, ನಾಗಪ್ಪ ಪೂಜಾರಿ, ರಮೇಶ ದೇಶಪಾಂಡೆ, ಬಸವರಾಜ ಇಮ್ಮನ ಇದ್ದರು.

## ಅಂಗನವಾಡಿ-ಕಂ-ಕ್ರಷ್ ಕೇಂದ್ರಗಳ ನೇಮಕಾತಿಗೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಯ ಜಿಲ್ಲೆಯ 7 ಶಿಶು ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ಒಟ್ಟು 68 ಅಂಗನವಾಡಿ-ಕಂ-ಕ್ರಷ್ ಕೇಂದ್ರಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಕೇಂದ್ರಗಳಲ್ಲಿ ಖಾಲಿ ಇರುವ 68 ಕಾರ್ಯಕರ್ತೆಯರು ಹಾಗೂ 68 ಸಹಾಯಕಿಯರ ಹುದ್ದೆಗಳನ್ನು ಗೌರವಧನದ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಇಂಡಿ ತಾಲೂಕಿನಲ್ಲಿ 8 ಕಾರ್ಯಕರ್ತೆಯರು ಹಾಗೂ 8 ಸಹಾಯಕಿಯರು, ಚಡಚಣದಲ್ಲಿ 4 ಕಾರ್ಯಕರ್ತೆಯರು ಹಾಗೂ 4 ಸಹಾಯಕಿಯರು, ಸಿಂದಗಿಯಲ್ಲಿ 8 ಕಾರ್ಯಕರ್ತೆಯರು ಹಾಗೂ 8 ಸಹಾಯಕಿಯರು, ವಿಜಯಪುರ ಗ್ರಾಮೀಣ ವ್ಯಾಪ್ತಿಯಲ್ಲಿ 10 ಕಾರ್ಯಕರ್ತೆಯರು ಹಾಗೂ 10 ಸಹಾಯಕಿಯರು, ವಿಜಯಪುರ ನಗರದಲ್ಲಿ 24 ಕಾರ್ಯಕರ್ತೆಯರು ಹಾಗೂ 24 ಸಹಾಯಕಿಯರು, ಬಸವನ ಬಾಗೇವಾಡಿಯಲ್ಲಿ 8 ಕಾರ್ಯಕರ್ತೆಯರು ಹಾಗೂ 8 ಸಹಾಯಕಿಯರು ಮತ್ತು ಮುದ್ದೇಬಿಹಾಳ ತಾಲೂಕಿನಲ್ಲಿ 6 ಕಾರ್ಯಕರ್ತೆಯರು ಹಾಗೂ 6 ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ.ಆಯ್ಕೆಯಾಗುವ ಅಂಗನವಾಡಿ-ಕಂ-ಕ್ರಷ್ ಕಾರ್ಯಕರ್ತೆಯರಿಗೆ ಮಾಸಿಕ 5,500 ಹಾಗೂ ಸಹಾಯಕಿಯರಿಗೆ ಮಾಸಿಕ 3,000 ಗೌರವಧನ ನೀಡಲಾಗುತ್ತದೆ. ಆಸಕ್ತ ಹಾಗೂ ಅರ್ಹ ಮಹಿಳಾ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ಮೂಲ ದಾಖಲೆಗಳೊಂದಿಗೆ ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗೆ ಅಕ್ಟೋಬರ್ 23ರೊಳಗಾಗಿ ಸಲ್ಲಿಸಬೇಕು. ನಿಗದಿತ ಅವಧಿಯ ನಂತರ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ನೇಮಕಾತಿಗೆ ಸಂಬಂಧಿಸಿದ ಮಾರ್ಗಸೂಚಿಗಳು, ಅರ್ಹತಾ ಷರತ್ತುಗಳು ಹಾಗೂ ನಿಗದಿತ ಅರ್ಜಿ ನಮೂನೆ ಸೇರಿದಂತೆ ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಆಯಾ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಡಾ. ಸಂತೋಷಕುಮಾರ ಎಚ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಲಮೇಲ ಪಟ್ಟಣದಲ್ಲಿ ಸಾಲುಮರದ ತಿಮ್ಮಕ್ಕ. ವೃಕ್ಷೋದ್ಯಾನ ಲೋಕಾರ್ಪಣೆಗೊಳಿಸಿದ ಶಾಸಕ ಅಶೋಕ ಮನಗೂಳಿ ಹೇಳಿಕೆ

# ಉದ್ಯಾನ ಉಳಿಸಿಕೊಂಡು ಹೋಗುವ ಜವಾಬ್ದಾರಿ ನಿಮ್ಮೆಲ್ಲರದು

■ ಉದಯರಶ್ಮಿ ದಿನಪತ್ರಿಕೆ

ಆಲಮೇಲ: ಪಟ್ಟಣದ ಮಹಾಜನತೆಯ ಬಹುದಿನಗಳ ಬೇಡಿಕೆಗೆ ಸ್ಪಂದಿಸಿ, ಕೆರೆ ಮರು ನಿರ್ಮಾಣ ಹಾಗೂ ಕೆರೆಯ ಹತ್ತಿರ ಸುಂದರವಾದ ಸಾಲುಮರ ತಿಮ್ಮಕ್ಕ ವೃಕ್ಷೋದ್ಯಾನವನ್ನು ಆರಣ್ಯ ಇಲಾಖೆ ನಿರ್ಮಿಸಿದ್ದು, ಈ ಉದ್ಯಾನವನದಿಂದ ಸುತ್ತ ಮುತ್ತಲಿನ ಗ್ರಾಮಗಳ ಸಾರ್ವಜನಿರು, ಹಿರಿಯರಿಗೆ ಮತ್ತು ಮಕ್ಕಳು ವಾಯು ವಿಹಾರ ಹಾಗೂ ವಿಶ್ರಾಂತಿ ಪಡೆಯಲು ಅನುಕೂಲವಾಗಲಿದೆ ಎಂದು ಶಾಸಕ ಅಶೋಕ್ ಮನಗೂಳಿ ಹೇಳಿದರು.

ಪಟ್ಟಣದಲ್ಲಿ ಸಾಲುಮರ ತಿಮ್ಮಕ್ಕ ವಕ್ಷೋದ್ಯಾನವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿಜಯಪುರ ಮತ್ತು ಸಿಂದಗಿಯ ಆರಣ್ಯ ಅಧಿಕಾರಿಗಳು ಕೂಡಿಕೊಂಡು ಸರಿಯಾದ ರೀತಿಯಲ್ಲಿ ಸುಂದರವಾದ ಸಾಲುಮರದ ತಿಮ್ಮಕ್ಕ ವಕ್ಷೋದ್ಯಾನ ನಿರ್ಮಾಣ ಮಾಡಿದ್ದಾರೆ. ಅಲಮೇಲ ಪಟ್ಟಣದ ಮಹಾಜನತೆ ಸರಿಯಾದ ರೀತಿಯಲ್ಲಿ ಇದರ ಸದುಪಯೋಗ ಪಡೆದುಕೊಳ್ಳಬೇಕು. ಇದು ಸರಕಾರದ ಆಸ್ತಿ ಅಲ್ಲ, ಇದು ನಿಮ್ಮ ಅಲಮೇಲ ಪಟ್ಟಣದ ಆಸ್ತಿ, ಈ ಉದ್ಯಾನವನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದು ಹೇಳಿದರು.

ಸಾನಿಧ್ಯ ವಹಿಸಿದ ಚಂದ್ರಶೇಖರ ಶಿವಾಚಾರ್ಯರು ಮಾತನಾಡಿ, ಆಲಮೇಲ ಪಟ್ಟಣದಲ್ಲಿ ಸುಂದರವಾದ ಸಾಲುಮರದ ತಿಮ್ಮಕ್ಕ ವಕ್ಷೋದ್ಯಾನ ನಿರ್ಮಾಣ ಮಾಡಿದ್ದು



ಪಟ್ಟಣದ ಜನತೆಗೆ ಬಹಳ ಸಂತೋಷವಾಗಿದೆ. ಈ ಬೃಹತ್ ಉದ್ಯಾನ ವನದಲ್ಲಿ ಹಿರಿಯ ನಾಗರಿಕರು ಸಾರ್ವಜನಿಕರು ಮತ್ತು ಮಕ್ಕಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಹಲವಾರು ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶಿವಕುಮಾರ ಗುಂದಗಿ. ಅರ್ಬನ್ ಬ್ಯಾಂಕಿನ ಅಧ್ಯಕ್ಷರು ಅಲಮೇಲ, ವಿಜಯಪುರ ಅರಣ್ಯ ಅಧಿಕಾರಿಗಳಾದ ಮಲ್ಲಿನಾಥ ಕೋಸನಾಳ, ಸೆಲ್ವ್ ರಾಜು ನಾಯ್ಕರ್ ಎಂ ಜಿ. ಆಂದೋಲಿ, ಶಿವಾನಂದ ಮಾಡಿಗೊಂಡ ಉಮರ ಬಿಳವಾರ ಪಟ್ಟಣ ಪಂಚಾಯಿತಿ ಅಧ್ಯಕ್ಷರು. ಚಂದು ಹಳಿಮನಿ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷರು. ಸಾಧಿಕ್ ಸುಂಬಡ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು. ರಮೇಶ್ ಬಂಟನೂರ. ನಾಗರಿಕ ವೇದಿಕೆಯ ಅಧ್ಯಕ್ಷರು, ಬಸವರಾಜ್ ತೆಲ್ಲೂರ ಗ್ಯಾರಂಟಿ ಸಮಿತಿ ಅಧ್ಯಕ್ಷರು ಸೇರಿದಂತೆ ಅನೇಕರಿದ್ದರು.

## ಆಲಮಟ್ಟಿಯಲ್ಲಿನ ಹಳಕಟ್ಟಿ ಪ್ರೌಢಶಾಲೆಯಲ್ಲಿ ಕರಕುಶಲ ಕಲೆ ಪ್ರದರ್ಶನ, ಜಾಗೃತಿ ಕಾರ್ಯಕ್ರಮ

# ಕರಕುಶಲ ವಸ್ತುಗಳ ಕಲಾ ಪ್ರಾತ್ಯಕ್ಷಿಕೆಗೆ ಮಕ್ಕಳು ಫಿದಾ!

■ ಉದಯರಶ್ಮಿ ದಿನಪತ್ರಿಕೆ

ಆಲಮಟ್ಟಿ: ಅಲ್ಲಿ ವಿಭಿನ್ನ ಕಲ್ಪನೆಯ ಸ್ಪರ್ಶವುಳ್ಳ ಮಾನವನ ಕೈಚಳಕದಿಂದ ಉಪಯುಕ್ತ ವಸ್ತುಗಳು ನಾವೀನ್ಯತೆಯಿಂದ ತಯಾರಾಗುತ್ತಿದ್ದವು. ನಿರುಪಯುಕ್ತ ಸಾಮಗ್ರಿಗಳು ಜೀವ ವೈವಿಧ್ಯತೆಯ ರೂಪ ಪಡೆದು ಉಪಯುಕ್ತವಾಗಿ ಕಣ್ಮನ ಸೆಳೆಯುತ್ತಿದ್ದವು. ಇಂಥದೊಂದು ಕಲಾ ಸಾಧನಗಳ ದೃಶ್ಯಗಳನ್ನು ಕೌತಕದಿಂದ ವೀಕ್ಷಿಸುತ್ತಿದ್ದ ಮಕ್ಕಳ ಕಣ್ಣಂಚಿನಲ್ಲಿ ಕರಕುಶಲ ಕಲೆಗಳ ವೈವಿಧ್ಯಮಯ ಪರಂಪರೆ ಅನಾವರಣಗೊಂಡಿತ್ತು !

ಇಲ್ಲಿನ ಆರ್.ಬಿ.ಪಿ.ಜೆ.ಹಳಕಟ್ಟಿ ಪ್ರೌಢಶಾಲೆ ಕರಕುಶಲ ಕಲೆಗಳ ಪರಿಕಲ್ಪನೆಯ ಸೃಜನಾತ್ಮಕ ಕಲಾಮೇಳದ ರಸಗಾನಕ್ಕೆ ಈಚೆಗೆ ಸಾಕ್ಷಿಯಾಗಿತ್ತು !

ಭಾರತ ಸರಕಾರ ಜವಳಿ ಸಚಿವಾಲಯದ ಕರಕುಶಲ ವಿಭಾಗದ ಮಾರ್ಕೆ9ಟಿಂಗ್ ಸಹಾಯ ಮತ್ತು ಸೇವೆಗಳು ಎಚ್.ಡಿ.ಪಿ ಅಡಿಯಲ್ಲಿ ಕರಕುಶಲ ಕಲೆಗಳ ಪ್ರದರ್ಶನ ಹಾಗೂ ಜಾಗೃತಿ ಕಾರ್ಯಕ್ರಮ ಸಂಯೋಜನೆಗೊಂಡಿತ್ತು.

ಇದರಂಗವಾಗಿ ನಡೆದ ಪ್ರಾತ್ಯಕ್ಷಿಕೆ ತೋರಣದಲ್ಲಿ ಕರಕುಶಲ ಕಲೆಗಳ ರಸದೌತಣ ಮಕ್ಕಳು ಸವಿಯುವ ಸುಯೋಗ ಒದಗಿತು. ಕರಕುಶಲ ವಸ್ತುಗಳ ತಯಾರಿಕೆಯ ಕಲಾ ಕೌಶಲ್ಯ ಕಣ್ತುಂಬಿಸಿಕೊಂಡು ಯುವಕರು ಸಂತಸಪಟ್ಟರು.

ಸಂಪನ್ಮೂಲ ವ್ಯಕ್ತಿಗಳು ಪ್ರದರ್ಶಿ9ಸಿದ ಪ್ರಾತ್ಯಕ್ಷಿಕೆಯಲ್ಲಿ ಕಲಾತ್ಮಕವಾಗಿ ಸೃಜನಶೀಲತೆಯಿಂದ ಹಲ ಬಗೆಯ ವಸ್ತುಗಳು ತಯಾರಾಗಿ ಸೌಂದರ್ಯ ಮೀಮಾಂಸೆಯೊಂದಿಗೆ ಕರಕುಶಲ ಕಲಾಭಿರುಚಿ ಪ್ರಜ್ಞೆ ಮಕ್ಕಳಲ್ಲಿ ಮೂಡಿಸುವಲ್ಲಿ ವಿಶಿಷ್ಟ ಪಾತ್ರ ವಹಿಸಿತು.

ಸ್ವಹಸ್ತದಿಂದ ವಸ್ತುಗಳು ಅಲಂಕಾರಿಕವಾಗಿ ವಿನ್ಯಾಸಗೊಳ್ಳುತ್ತಿದ್ದವು. ಇದನ್ನು ಕಂಡು ವಿದ್ಯಾರ್ಥಿಗಳು ಖುಷಿಯಿಂದ ಚಪ್ಪಾಳೆ ತಟ್ಟಿ ಆತ್ಮತೃಪ್ತಿಯಿಂದ ಸಂಭ್ರಮಿಸಿದರು. ತಂತ್ರಜ್ಞಾನದ ಪರಂಪರೆಯಲ್ಲಿ ಹಳೆಯ ಪ್ರಾಚೀನ ಕಾಲದಲ್ಲಿನ ಕಲೆಗಳ ಹಾಗೂ ಪ್ರಕೃತಿ ಪೂರಕ ವಸ್ತುಗಳ ಸುಗಂಧ ಕಲಾ ವೈಭವದ ಶ್ರೀಮಂತಿಕೆ ಪರಿಮಳಿಸಿತು. ಈ ಕರಕುಶಲ ಕಲಾ ಕಳೆ ಮಕ್ಕಳ ಮನದಲ್ಲಿ ಹೊಸ ಭಾಷ್ಯ ತೆರೆಯಿಸಿತು. ಕರಕುಶಲ ಕಲಾಂಕುರದ ಬುತ್ತಿಯಲ್ಲಿ ಸಂಗಮಿಸಿ ವಿಹರಿಸಿದರು. ಶ್ರಮ, ಸಂಸ್ಕೃತಿ ಮಹತ್ವ ಅರಿತು ಬದುಕಿನ ಆಶಾಭಾವ ಸಾಧನದ ಇಂಚರ ತಿಳಿದುಕೊಳ್ಳಲು ಪ್ರಯತ್ನಿಸಿದ್ದು ವಿಶೇಷ. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡಿದ್ದ ಕಾಳಪ್ಪ ಬಡಿಗೇರ, ಮುತ್ತಪ್ಪ ಬುಡ್ಡರ, ಶರಣಪ್ಪ ಕುಂಬಾರ, ಶ್ರೀಮತಿ ರೇಣುಕಾ ಬಡಿಗೇರ ವಿವಿಧ ಪ್ರಾತ್ಯಕ್ಷಿಕೆ ನೀಡಿ ಮಕ್ಕಳಿಗೆ ಹುರಿದುಂಬಿಸಿದರು. ಬಿದಿರಿನ ಬುಟ್ಟಿ ತಯಾರಿಸುವುದು, ರೊಟ್ಟಿ ಬುಟ್ಟಿ ಮರ ಹೆಣೆಯುವುದು, ಕುಂಬಾರಿಕೆ ಕಲೆಯಲ್ಲಿ



ಮಣ್ಣಿನ ಮಡಿಕೆ,ಗಡಿಗೆ ತಯಾರಿಸುವದು, ಬಡಿಗೇತನ ಕಲೆಯಲ್ಲಿ ಕಟ್ಟಿಗೆ ಮೇಲೆ ದೇವತಾಕೃತಿಗಳ ಕೆತ್ತನೆ, ಕಸೂತಿ ಕಲೆಯಲ್ಲಿ ಬಟ್ಟೆಗಳ ಮೇಲೆ ನಕ್ಷಾ ಚಿತ್ತಾರಗಳ ವರ್ಣನೆ ಕಲಾ ಬಿಂಬ ಸೃಜಿಸುವ ಕಸೂತಿ ಕಲೆ, ಮರಗೆಲಸದ ಚಾತುರ್ಯಗಳು ಹೀಗೆ ಹಲ ಕರಕುಶಲ ವಸ್ತುಗಳು ಈ ಕಲಾ ಮೇಳದ ಪ್ರಾತ್ಯಕ್ಷಿಕೆಯಲ್ಲಿ ಅಕರ್ಷಣೆಯಿಂದ ಅಚ್ಚಾದವು. ಭಾರತ ಸರಕಾರ ಜವಳಿ ಮಂತ್ರಾಲಯ ಕರಕುಶಲ ವಿಭಾಗದ ಅಸಿಸ್ಟೆಂಟ್ ಡೈರೆಕ್ಟರ್ ಕಿರಣ ವ್ಹಿ.ಎನ್, ಗ್ರಾಮೀಣಾಭಿವೃದ್ಧಿ ಸಂಸ್ಥೆ ಅಧ್ಯಕ್ಷ ಶಿವಬಸಯ್ಯ ಮಠಪತಿ, ಮುಖ್ಯೋಪಾಧ್ಯಾಯ ಜಿ.ಎಂ.ಕೋಟ್ಯಾಳ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕರಕುಶಲದ ಚಟುವಟಿಕೆಯಲ್ಲಿ ಪಾಲ್ಗೊಂಡು ಗಮನ ಸೆಳೆದ ಮಕ್ಕಳಿಗೆ ಪ್ರಮಾಣ ಪತ್ರ ಆಯೋಜಕರಿಂದ ವಿತರಿಸಲಾಯಿತು. ಶಿಕ್ಷಕರಾದ ಎನ್.ಎಸ್.ಬಿರಾದಾರ, ಎಸ್.ಎಚ್.ನಾಗಣಿ, ಆರ್.ಎಂ.ರಾಠೋಡ, ಎಂ.ಬಿ.ದಶವಂತ, ಶ್ರೀಧರ ಚಿಮ್ಮಲಗಿ, ಶ್ರೀಮತಿ ಸಾವಿತ್ರಿ ಸಜ್ಜನ, ಇಬ್ರಾಹಿಂ ಹುನಗುಂದ, ಕರುಣಿಕ ಸಚೀನ ಹೆಬ್ಬಾಳ ಇತರರಿದ್ದರು. ಎಲ್.ಆರ್.ಸಿಂಧೆ ಪ್ರಾರ್ಥಿ9ಸಿದರು. ಜಿ.ಆರ್.ಜಾಧವ ಸ್ವಾಗತಿಸಿ ನಿರೂಪಿಸಿ ವಂದಿಸಿದರು.

# ಇರಾನ್ ಇಸ್ರೇಲ್ ಯುದ್ಧದ ನೆರಳಲ್ಲಿ ಬದಲಾಗುತ್ತಿರುವ ಜಗತ್ತು




**ಆಕಾಶ ರೋಡಗಿ.**
ಶಿವೂರ – ಅಫಜಲಪುರ
ಕಲಬುರ್ಗಿ ಜಿಲ್ಲೆ

**ತೈಲ ದುಬಾರಿಯಾದರೆ ಪೆಟ್ರೋಲ್ ಮತ್ತು ಡೀಸೆಲ್ ಮಾತ್ರ ದುಬಾರಿಯಾಗುವುದಿಲ್ಲ. ಕೃಷಿ, ಕಾರ್ಖಾನೆ, ವಿದ್ಯುತ್ ಉತ್ಪಾದನೆ, ವಿಮಾನಯಾನ, ಸರಕು ಸಾಗಣೆಎಲ್ಲದರ ವೆಚ್ಚಕ್ಕೂ ಅದರ ನೆರಳು ಬೀಳುತ್ತದೆ. ಹೀಗಾಗಿ ಹೋರ್ಮುಜ್‌ನ ಬೀಗ ಕೇವಲ ಮಧ್ಯಪ್ರಾಚ್ಯದ ಬಾಗಿಲಿಗೆ ಹಾಕಿರುವ ಬೀಗವಲ್ಲ. ಅದು ಜಾಗತಿಕ ಬೆಲೆಗಳ ಬಾಗಿಲಿಗೆ ಹಾಕಿರುವ ಬೀಗ.**

■ ಉದಯರಶ್ಮಿ ದಿನಪತ್ರಿಕೆ

ಯುದ್ಧದ ಕಿಡಿ ಈಗ ತೈಲದ ನರನಾಡಿಗೆ ತಲುಪಿದೆ; ವಾಷಿಂಗ್ಟನ್‌ನ ರಾಜಕೀಯದಿಂದ ದೆಹಲಿಯಅಡುಗೆಮನೆಯವರೆಗೆಪರಿಣಾಮ!

ಪಶ್ಚಿಮ ಏಷ್ಯಾದಲ್ಲಿ ಹೊತ್ತಿಕೊಂಡ ಸಂಘರ್ಷ ಈಗ ಒಂದು ದೇಶದ ಗಡಿಯಲ್ಲಿ ಸೀಮಿತವಾಗಿಲ್ಲ. ಇರಾನ್ ವಿರುದ್ಧ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಸೈನಿಕ ಕ್ರಮಗಳಿಂದ ಫೆಬ್ರವರಿ 2026ರಲ್ಲಿ ಆರಂಭವಾದ ಸಂಘರ್ಷ, ಜೂನ್‌ನಲ್ಲಿ ಮಧ್ಯಂತರ ಒಪ್ಪಂದದ ಹಂತ ತಲುಪಿದರೂ ಶಾಶ್ವತ ರಾಜಕೀಯ ಪರಿಹಾರ ಇನ್ನೂ ದೂರದಲ್ಲಿದೆ. ಪರಮಾಣು ಕಾರ್ಯಕ್ರಮ, ನಿರ್ಬಂಧಗಳು, ಭದ್ರತಾ ಖಾತರಿಗಳು ಮತ್ತು ಹೋರ್ಮುಜ್ ಜಲಸಂಧಿಯ ಮುಕ್ತ ಸಂಚಾರ ಈಗ ಮಾತುಕತೆಯ ಪ್ರಮುಖ ಕೇಂದ್ರಗಳಾಗಿವೆ.

ಇದೀಗ ಈ ಸಂಘರ್ಷದ ಕೇಂದ್ರಬಿಂದು ಒಂದು ಜಲಮಾರ್ಗ.

ಹೋರ್ಮುಜ್ ಜಲಸಂಧಿ

ಅಕ್ಟೋಬರ್ 4ರ ಬೆಳವಣಿಗೆಯಲ್ಲಿ ಇರಾನ್ ಸಂಸತ್ ಅಧ್ಯಕ್ಷ ಮೊಹಮ್ಮದ್ ಬಾಘೆರ್ ಘಾಲಿಬಾಫ್, ಜೂನ್‌ನಲ್ಲಿ ರೂಪುಗೊಂಡ ಮಧ್ಯಂತರ ಒಪ್ಪಂದದ ಏಳು ಷರತ್ತುಗಳು ಈಡೇರಿದ ಬಳಿಕವೇ ಹೋರ್ಮುಜ್ ಅನ್ನು ತೆರೆಯಲಾಗುವುದು ಎಂದು ಹೇಳಿದ್ದಾರೆ. ಇರಾನ್ ಮತ್ತು ಅಮೆರಿಕದ ನಡುವೆ ಪರೋಕ್ಷ ಮಾತುಕತೆ ಮುಂದುವರಿದಿದ್ದರೂ, ಷರತ್ತುಗಳನ್ನು ಯಾವ ಕ್ರಮದಲ್ಲಿ ಜಾರಿಗೆ ತರಬೇಕು ಎಂಬುದೇ ದೊಡ್ಡ ಅಡೆತಡೆಯಾಗಿದೆ.

ಇಲ್ಲಿ ಒಂದು ಅಂಕಿ ಇಡೀ ಜಗತ್ತಿನ ಆತಂಕವನ್ನು ಅರ್ಥಮಾಡಿಕೊಳ್ಳಲು ಸಾಕು.

2024ರಲ್ಲಿ ಹೋರ್ಮುಜ್ ಮೂಲಕ ದಿನಕ್ಕೆ ಸರಾಸರಿ ಸುಮಾರು 2 ಕೋಟಿ ಬ್ಯಾರೆಲ್ ತೈಲ ಸಾಗಿತ್ತು. ಇದು ಜಾಗತಿಕ




ಪೆಟ್ರೋಲಿಯಂ ದ್ರವ ಬಳಕೆಯ ಸುಮಾರು ಐದನೇ ಒಂದು ಭಾಗಕ್ಕೆ ಸಮಾನ. ದ್ರವೀಕೃತ ನೈಸರ್ಗಿಕ ಅನಿಲದ ಜಾಗತಿಕ ಸಾಗಣೆಯಲ್ಲೂ ಸುಮಾರು ಐದನೇ ಒಂದು ಭಾಗ ಈ ಮಾರ್ಗದ ಮೂಲಕ ಸಾಗುತ್ತದೆ.

ಅಂದರೆ ಇರಾನ್‌ನ ಕ್ಷಿಪಣಿಗಳು ಮಧ್ಯಪ್ರಾಚ್ಯದಲ್ಲಿದ್ದರೂ, ಅದರ ಪರಿಣಾಮದ ಅಲೆಗಳು ನ್ಯೂಯಾರ್ಕ್‌ನ ಮಾರುಕಟ್ಟೆಯಿಂದ ಮುಂಬೈನ ಷೇರುಪೇಟೆಯವರೆಗೆ, ಅಮೆರಿಕದ ಇಂಧನ ಕೇಂದ್ರದಿಂದ ಭಾರತದ ಅಡುಗೆಮನೆಯವರೆಗೆ ತಲುಪಬಹುದು.

ಇಸ್ರೇಲ್‌ಗೆ ಇದು ಕೇವಲ ಯುದ್ಧವಲ್ಲ ಭದ್ರತೆಯ ಅಸ್ತಿತ್ವದ ಪ್ರಶ್ನೆ

ಇಸ್ರೇಲ್‌ನ ದೃಷ್ಟಿಯಲ್ಲಿ ಇರಾನ್‌ನ ಕ್ಷಿಪಣಿ ಸಾಮರ್ಥ್ಯ, ಪರಮಾಣು ಕಾರ್ಯಕ್ರಮ ಮತ್ತು ಪ್ರಾದೇಶಿಕ ಮಿತ್ರ ಜಾಲಗಳು ರಾಷ್ಟ್ರೀಯ ಭದ್ರತೆಯ ಪ್ರಶ್ನೆ.

ಆದರೆ ದೀರ್ಘಕಾಲದ ಯುದ್ಧದಲ್ಲಿ ಒಂದು ಹಂತದ ನಂತರ ಪ್ರಶ್ನೆ ಬದಲಾಗುತ್ತದೆ.

"ಯುದ್ಧವನ್ನು ಗೆಲ್ಲಬಹುದೇ?" ಎಂಬ ಪ್ರಶ್ನೆ ನಿಧಾನವಾಗಿ, "ಈ ಯುದ್ಧವನ್ನು ಎಷ್ಟು ಕಾಲ ಮುಂದುವರಿಸಬಹುದು ಎಂಬ ಪ್ರಶ್ನೆಯಾಗಿ ಬದಲಾಗುತ್ತದೆ.

ಗಾಜಾ, ಲೆಬನಾನ್, ಇರಾನ್ ಮತ್ತು ಇತರ ಮುಂಚೂಣಿಗಳಲ್ಲಿ ಒಂದೇ ಸಮಯದಲ್ಲಿ ಒತ್ತಡ ಮುಂದುವರಿದರೆ ಇಸ್ರೇಲ್‌ಗೆ ಸೈನಿಕ ಹೊರೆ ಮಾತ್ರವಲ್ಲ, ಆರ್ಥಿಕ ಮತ್ತು ರಾಜತಾಂತ್ರಿಕ ಹೊರೆ ಕೂಡ ಹೆಚ್ಚುತ್ತದೆ.

ಇದರ ನಡುವೆ ಅಕ್ಟೋಬರ್ 27, 2026ರಂದು ಇಸ್ರೇಲ್‌ನಲ್ಲಿ ರಾಷ್ಟ್ರೀಯ ಚುನಾವಣೆ ನಡೆಯಲಿದೆ. ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ರಾಜಕೀಯ ಭವಿಷ್ಯವೂ ಯುದ್ಧದ ನಿರ್ವಹಣೆ, ಭದ್ರತೆ ಮತ್ತು ಜನರ ಅಸಮಾಧಾನದೊಂದಿಗೆ ನೇರವಾಗಿ ಜೋಡಿಸಿಕೊಂಡಿದೆ.

ಇಲ್ಲಿ ಮತ್ತೊಂದು ಗಮನಾರ್ಹ ಬೆಳವಣಿಗೆ ನಡೆದಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನೆತನ್ಯಾಹು ಅವರನ್ನು ಚುನಾವಣೆಯಲ್ಲಿ ಬಹಿರಂಗವಾಗಿ ಬೆಂಬಲಿಸುವ ಪ್ರಶ್ನೆಗೆ ನೇರವಾಗಿ ಒಪ್ಪಿಗೆ ನೀಡದೆ ಹಿಂದೆ ಸರಿದಿದ್ದಾರೆ. ಇದು ಇಬ್ಬರ ನಡುವಿನ ಸಂಬಂಧ ಮುರಿದಿದೆ ಎಂದರ್ಥವಲ್ಲ; ಆದರೆ ಮಧ್ಯಪ್ರಾಚ್ಯದ ಯುದ್ಧದ ನಡುವೆ ಅಮೆರಿಕ ಇಸ್ರೇಲ್ ಸಂಬಂಧದಲ್ಲೂ ರಾಜಕೀಯ ಲೆಕ್ಕಾಚಾರ ಬದಲಾಗುತ್ತಿದೆ ಎಂಬ ಸೂಚನೆಯಾಗಿದೆ.

ಟ್ರಂಪ್‌ಗೆ ಇರಾನ್ ಯುದ್ಧ ಎಂದರೆ ವಿದೇಶಾಂಗ ನೀತಿಯಷ್ಟೇ ಅಲ್ಲ ಮತದಾರನ ಜೇಬಿನ ಪ್ರಶ್ನೆ

ಅಮೆರಿಕದಲ್ಲಿ ಈಗ ಜೋ ಬೈಡನ್‌ಕಮಲಾ ಹ್ಯಾರಿಸ್ ಆಡಳಿತವಿಲ್ಲ. ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾಗಿದ್ದಾರೆ. ನವೆಂಬರ್ 2026ರಲ್ಲಿ ಅಮೆರಿಕದ ಮಧ್ಯಂತರ ಚುನಾವಣೆ ನಡೆಯಲಿದೆ.

ಹೀಗಾಗಿ ಇರಾನ್ ಯುದ್ಧ ಟ್ರಂಪ್ ಆಡಳಿತದ ವಿದೇಶಾಂಗ ನೀತಿಯ ಪರೀಕ್ಷೆಯಾಗಿರುವಷ್ಟೇ, ಅಮೆರಿಕದ ಮತದಾರರ ದೈನಂದಿನ ಬದುಕಿನ ಪರೀಕ್ಷೆಯೂ ಆಗಿದೆ.

ಯುದ್ಧ ದೀರ್ಘವಾದರೆ ಸೇನಾ ವೆಚ್ಚ ಹೆಚ್ಚುತ್ತದೆ. ತೈಲ ದುಬಾರಿಯಾದರೆ ಸಾರಿಗೆ ವೆಚ್ಚ ಹೆಚ್ಚುತ್ತದೆ. ಸಾರಿಗೆ ವೆಚ್ಚ ಹೆಚ್ಚಾದರೆ ಆಹಾರ, ಕೃಷಿ, ಉತ್ಪಾದನೆ ಮತ್ತು ಸರಕು ಸಾಗಣೆ ವೆಚ್ಚಗಳ ಮೇಲೂ ಒತ್ತಡ ಬರುತ್ತದೆ.

ಅಮೆರಿಕದ ಪ್ರಸಿದ್ಧ ಬ್ರೂಕಿಂಗ್ಸ್ ಸಂಸ್ಥೆಯ ಜೂನ್ ವಿಶ್ಲೇಷಣೆಯೂ ಇದೇ ಅಪಾಯವನ್ನು ಎತ್ತಿ ತೋರಿಸಿದೆ. ಇರಾನ್ ಯುದ್ಧ ಅಮೆರಿಕದ ಜನರಲ್ಲಿ ಜನಪ್ರಿಯವಾಗಿಲ್ಲ; ಹೆಚ್ಚುತ್ತಿರುವ ಇಂಧನ ಬೆಲೆ, ಹಣದುಬ್ಬರ ಮತ್ತು ಸೇನಾ ವೆಚ್ಚಗಳು ಟ್ರಂಪ್ ಆಡಳಿತದ ಮೇಲೆ ರಾಜಕೀಯ ಒತ್ತಡ ಹೆಚ್ಚಿಸಬಹುದು ಎಂದು ಅದು ವಿಶ್ಲೇಷಿಸಿದೆ.

ಅಂದರೆ ವಾಷಿಂಗ್ಟನ್‌ನ ಯುದ್ಧದ ನಿರ್ಧಾರದ ಲೆಕ್ಕಾಚಾರ ಕೊನೆಗೆ ಅಮೆರಿಕದ ಸಾಮಾನ್ಯ ಕುಟುಂಬದ ಮಾಸಿಕ ಖರ್ಚಿನಲ್ಲೂ ಕಾಣಿಸಿಕೊಳ್ಳಬಹುದು.

ಹೋರ್ಮುಜ್ ಮುಚ್ಚಿದರೆ ಜಗತ್ತಿನ ಆರ್ಥಿಕತೆಗೆ ಏನಾಗುತ್ತದೆ?

ಹೋರ್ಮುಜ್ ಕೇವಲ ಒಂದು ಜಲಸಂಧಿಯಲ್ಲ. ಅದು ಜಾಗತಿಕ ಇಂಧನ ಆರ್ಥಿಕತೆಯ ನರನಾಡಿ.

2026ರ ಫೆಬ್ರವರಿ 28ರಿಂದ ಹೋರ್ಮುಜ್ ಸಂಚಾರದಲ್ಲಿ ದೊಡ್ಡ ಮಟ್ಟದ ವ್ಯತ್ಯಯ ಉಂಟಾಗಿದೆ. ಜೂನ್ ವೇಳೆಗೆ ಅದರ ಪರಿಣಾಮ ತೈಲ ಮಾತ್ರವಲ್ಲ, ದ್ರವೀಕೃತ ನೈಸರ್ಗಿಕ ಅನಿಲದ ಮಾರುಕಟ್ಟೆಯ ಮೇಲೂ ತೀವ್ರವಾಗಿ ಕಾಣಿಸಿಕೊಂಡಿತ್ತು.

ಇಲ್ಲಿ ಮೂರು ಪರಿಣಾಮಗಳು ಅತ್ಯಂತ ವೇಗವಾಗಿ ಕಾಣಿಸಿಕೊಳ್ಳುತ್ತವೆ.

ಮೊದಲನೆಯದು ತೈಲದ ಬೆಲೆ. ಪೂರೈಕೆ ಕಡಿಮೆಯಾದರೆ ಬೆಲೆ ಏರುವ ಒತ್ತಡ.

ಎರಡನೆಯದು ಸಾಗಣೆ ವೆಚ್ಚ. ಹಡಗುಗಳಿಗೆ ಪರ್ಯಾಯ ಮಾರ್ಗ ಬೇಕಾದರೆ ಪ್ರಯಾಣದ ದೂರ, ವಿಮಾ ವೆಚ್ಚ ಮತ್ತು ಸಾಗಣೆ ವೆಚ್ಚ ಹೆಚ್ಚಾಗುತ್ತದೆ.

ಮೂರನೆಯದು ಹಣದುಬ್ಬರ. ತೈಲ



ದುಬಾರಿಯಾದರೆ ಪೆಟ್ರೋಲ್ ಮತ್ತು ಡೀಸೆಲ್ ಮಾತ್ರ ದುಬಾರಿಯಾಗುವುದಿಲ್ಲ. ಕೃಷಿ, ಕಾರ್ಖಾನೆ, ವಿದ್ಯುತ್ ಉತ್ಪಾದನೆ, ವಿಮಾನಯಾನ, ಸರಕು ಸಾಗಣೆ ಎಲ್ಲದರ ವೆಚ್ಚಕ್ಕೂ ಅದರ ನೆರಳು ಬೀಳುತ್ತದೆ.

ಹೀಗಾಗಿ ಹೋರ್ಮುಜ್‌ನ ಬೀಗ ಕೇವಲ ಮಧ್ಯಪ್ರಾಚ್ಯದ ಬಾಗಿಲಿಗೆ ಹಾಕಿರುವ ಬೀಗವಲ್ಲ. ಅದು ಜಾಗತಿಕ ಬೆಲೆಗಳ ಬಾಗಿಲಿಗೆ ಹಾಕಿರುವ ಬೀಗ.

ಭಾರತದ ಪಾಲಿಗೆ ಇದು ದೂರದ ಯುದ್ಧವಲ್ಲ

ಭಾರತಕ್ಕೆ ಪಶ್ಚಿಮ ಏಷ್ಯಾ ಎಂದರೆ ಕೇವಲ ವಿದೇಶಾಂಗ ನೀತಿಯ ವಿಷಯವಲ್ಲ.

ಅದು ತೈಲ. ಅದು ವಿದೇಶಿ ವಿನಿಮಯ. ಅದು ವ್ಯಾಪಾರ. ಅದು ಇಂಧನ ಭದ್ರತೆ. ಅದು ಗಲ್ಫ್ ರಾಷ್ಟ್ರಗಳಲ್ಲಿ ದುಡಿಯುತ್ತಿರುವ ಲಕ್ಷಾಂತರ ಭಾರತೀಯರ ಬದುಕು. ಇಲ್ಲಿ ಸೆಪ್ಟೆಂಬರ್‌ನ ಅಂಕಿ ಗಮನಾರ್ಹವಾಗಿದೆ.

ಭಾರತದ ರಷ್ಯಾದಿಂದ ಕಚ್ಚಾ ತೈಲ ಆಮದು ಸೆಪ್ಟೆಂಬರ್‌ನಲ್ಲಿ ಸುಮಾರು 19 ಲಕ್ಷ ಬ್ಯಾರೆಲ್‌ಗಳಿಗೆ ಪ್ರತಿದಿನ ಇಳಿದಿದೆ. ಅದೇ ಸಮಯದಲ್ಲಿ ಇರಾಕ್, ಸೌದಿ ಅರೇಬಿಯಾ, ಕುವೈತ್ ಮತ್ತು ಕತಾರ್‌ನಿಂದ ಆಮದು ಹೆಚ್ಚಾಗಿದೆ. ಅಂದರೆ ಭಾರತ ಒಂದೇ ಮೂಲದ ಮೇಲೆ ಅವಲಂಬಿತವಾಗಿಲ್ಲ.

**ಇದು ಭಾರತದ ಪಾಲಿಗೆ ದೊಡ್ಡ ಪಾಠ**

ಇಂಧನ ಭದ್ರತೆ ಎಂದರೆ ಹೆಚ್ಚು ತೈಲ ಖರೀದಿಸುವುದಷ್ಟೇ ಅಲ್ಲ; ಜಗತ್ತಿನ ಯಾವ ದಿಕ್ಕಿನಿಂದ ಬೇಕಾದರೂ ತೈಲ ತರಿಸಿಕೊಳ್ಳುವ ಸಾಮರ್ಥ್ಯವನ್ನು ಉಳಿಸಿಕೊಳ್ಳುವುದು.

ಮತ್ತೊಂದು ಅಪಾಯ: ಹೋರ್ಮುಜ್ ಮಾತ್ರವಲ್ಲ, ಬಾಬ್ ಅಲ್-ಮಂದಬ್ ಕೂಡ

ಯಾರೂ ಹೆಚ್ಚು ಮಾತನಾಡದ ಮತ್ತೊಂದು ಅಪಾಯ: ಹೋರ್ಮುಜ್ ಮಾತ್ರವಲ್ಲ, ಬಾಬ್ ಅಲ್-ಮಂದಬ್ ಕೂಡ!

ಇಲ್ಲಿಯೇ ಈ ಯುದ್ಧದ ಇನ್ನೊಂದು ಅಪಾಯಕಾರಿ ಮುಖ ಕಾಣಿಸುತ್ತದೆ.

ಪರ್ಷಿಯನ್ ಕೊಲ್ಲಿಯಿಂದ ತೈಲ ಹೊರಬರುವ ಉತ್ತರದ ಬಾಗಿಲು ಹೋರ್ಮುಜ್ ಆಗಿದ್ದರೆ, ಕೆಂಪು ಸಮುದ್ರದ ದಕ್ಷಿಣದ ಪ್ರಮುಖ ಬಾಗಿಲು ಬಾಬ್ ಅಲ್-ಮಂದಬ್.

ಈ ಎರಡು ಜಲಮಾರ್ಗಗಳಲ್ಲಿ ಒಂದೇ ಸಮಯದಲ್ಲಿ ಅಸ್ಥಿರತೆ ಉಂಟಾದರೆ ಜಾಗತಿಕ ಸಾಗಣೆಗೆ ಒತ್ತಡ ಮತ್ತಷ್ಟು ಹೆಚ್ಚುತ್ತದೆ.

ಇತ್ತೀಚಿನ ಬೆಳವಣಿಗೆಯಲ್ಲಿ ಇರಾನ್ ಬೆಂಬಲಿತ ಹೌತಿ ಪಡೆಗಳು ಯೆಮನ್‌ನ ಕೆಂಪು ಸಮುದ್ರ ತೀರದಲ್ಲಿ ತಮ್ಮ ಹಿಡಿತವನ್ನು ವಿಸ್ತರಿಸಿಕೊಂಡಿದ್ದು, ಬಾಬ್ ಅಲ್-ಮಂದಬ್ ಸುತ್ತಲಿನ ಪರಿಸ್ಥಿತಿಯೂ ಗಂಭೀರವಾಗಿದೆ. ಇದಕ್ಕೆ ಪ್ರತಿಯಾಗಿ ಸೌದಿ ಅರೇಬಿಯಾ ಬೆಂಬಲಿತ ಯೆಮನ್ ಸರ್ಕಾರ ಹೌತಿಗಳ ವಿರುದ್ಧ ದೊಡ್ಡ ಪ್ರಮಾಣದ ಸೈನಿಕ ಕಾರ್ಯಾಚರಣೆ ಆರಂಭಿಸುವುದಾಗಿ ಘೋಷಿಸಿದೆ.

ಇದರರ್ಥ ಏನು?

ಹೋರ್ಮುಜ್‌ನಲ್ಲಿ ಇರಾನ್ ಅಮೆರಿಕ ಸಂಘರ್ಷ, ಬಾಬ್ ಅಲ್-ಮಂದಬ್‌ನಲ್ಲಿ ಹೌತಿಸೌದಿ ಸಂಘರ್ಷಎರಡೂ ಒಂದೇ ಸಮಯದಲ್ಲಿ ತೀವ್ರವಾದರೆ, ಜಾಗತಿಕ ಇಂಧನ ಮತ್ತು ಸರಕು ಸಾಗಣೆ ವ್ಯವಸ್ಥೆಗೆ ಎರಡು ಬದಿಯಿಂದ ಒತ್ತಡ ಬರಬಹುದು.

ಇದು ಕೇವಲ ಯುದ್ಧದ ಭೌಗೋಳಿಕ ವಿಸ್ತರಣೆ ಅಲ್ಲ. ಜಾಗತಿಕ ವ್ಯಾಪಾರದ ನರನಾಡಿಗಳ ಮೇಲಿನ ಒತ್ತಡ.

ಸೌದಿ ಅರೇಬಿಯಾದ ಮೇಲೆ ಹೌತಿಗಳ ನಿರಂತರ ದಾಳಿ ಹೊಸ ಅಪಾಯದ ಸೂಚನೆ

ಇತ್ತೀಚಿನ ದಿನಗಳಲ್ಲಿ ಸೌದಿ ಅರೇಬಿಯಾ ಮತ್ತೊಂದು ಮುಂಭಾಗದಿಂದ ಒತ್ತಡ ಎದುರಿಸುತ್ತಿದೆ.

ಅಕ್ಟೋಬರ್ 3ರಂದು ರಿಯಾದ್‌ನಲ್ಲಿರುವ ಸೌದಿ ಅರಾಮ್ಕೊಗೆ ಸಂಬಂಧಿಸಿದ ಒಂದು ಕೇಂದ್ರದ ಮೇಲೆ ಕ್ಷಿಪಣಿ ಮತ್ತು ಮಾನವರಹಿತ ವಿಮಾನಗಳ ದಾಳಿ ನಡೆಸಿರುವುದಾಗಿ ಹೌತಿಗಳು ಹೇಳಿಕೊಂಡಿವೆ. ರಿಯಾದ್‌ನಲ್ಲಿ ಹೊಗೆ ಮತ್ತು ಬೆಂಕಿ ಕಾಣಿಸಿಕೊಂಡಿರುವುದನ್ನು ಪ್ರತ್ಯಕ್ಷದರ್ಶಿಗಳು




ತಿಳಿಸಿದ್ದಾರೆ. ಆದರೆ ಆ ನಿರ್ದಿಷ್ಟ ಅರಾಮ್ಕೊ ಕೇಂದ್ರದ ಮೇಲೆ ದಾಳಿ ನಡೆದಿರುವುದನ್ನು ಸೌದಿ ಅಧಿಕಾರಿಗಳು ಅಥವಾ ಅರಾಮ್ಕೊ ತಕ್ಷಣ ಅಧಿಕೃತವಾಗಿ ದೃಢಪಡಿಸಿಲ್ಲ.

ಇದಕ್ಕೂ ಮುನ್ನ ಯಾನ್ಬು ಸೇರಿದಂತೆ ಸೌದಿ ಇಂಧನ ಮೂಲಸೌಕರ್ಯಗಳ ಮೇಲೂ ದಾಳಿ ನಡೆಸಿರುವುದಾಗಿ ಹೌತಿಗಳು ಹೇಳಿಕೊಂಡಿದ್ದರು. ಸೌದಿ ಅರೇಬಿಯಾ ಕೆಲವು ಕ್ಷಿಪಣಿಗಳನ್ನು ತಡೆದಿರುವುದಾಗಿ ತಿಳಿಸಿತ್ತು. ಇದನ್ನು ಸಣ್ಣ ಬೆಳವಣಿಗೆ ಎಂದು ನೋಡಲು ಸಾಧ್ಯವಿಲ್ಲ.

ಏಕೆಂದರೆ ಸೌದಿ ಅರೇಬಿಯಾ ಕೇವಲ ಒಂದು ದೇಶವಲ್ಲ. ಅದು ವಿಶ್ವದ ಪ್ರಮುಖ ತೈಲ ಉತ್ಪಾದಕ. ಅದರ ಇಂಧನ ಮೂಲಸೌಕರ್ಯಗಳ ಮೇಲೆ ನಿರಂತರ ಒತ್ತಡ ಉಂಟಾದರೆ ಮಾರುಕಟ್ಟೆಯ ಮನೋಭಾವವೇ ಬದಲಾಗಬಹುದು.

**ಇಲ್ಲಿ ಇನ್ನೊಂದು ಸೂಕ್ಷ್ಮ ಸಂಗತಿಯಿದೆ.**

ಸೌದಿ ಅರೇಬಿಯಾ ಒಂದು ಕಡೆ ಹೌತಿಗಳ ವಿರುದ್ಧ ತನ್ನ ಭದ್ರತಾ ಕ್ರಮಗಳನ್ನು ಹೆಚ್ಚಿಸುತ್ತಿದೆ. ಮತ್ತೊಂದೆಡೆ ಅಮೆರಿಕ ನೇರವಾಗಿ ಯುದ್ಧದ ಮತ್ತೊಂದು ದೊಡ್ಡ ಮುಂಭಾಗಕ್ಕೆ ಇಳಿಯುವ ಬಗ್ಗೆ ಎಚ್ಚರಿಕೆಯಿಂದ ಹೆಜ್ಜೆ ಹಾಕುತ್ತಿದೆ. ಅಮೆರಿಕ ಸದ್ಯ ಸೌದಿಗೆ ಗುಪ್ತಚರ ಮತ್ತು ಗುರಿ ಗುರುತಿಸುವಿಕೆಯಂತಹ ಸಹಾಯ ನೀಡುತ್ತಿದ್ದರೂ ನೇರ ಸೈನಿಕ ಪಾಲ್ಗೊಳ್ಳುವಿಕೆಯಲ್ಲಿ ಹಿಂದೆ ಸರಿದಿದೆ ಎಂಬ ವರದಿಗಳಿವೆ.

ಇದರ ಅರ್ಥ ಸ್ಪಷ್ಟ.

ಮಧ್ಯಪ್ರಾಚ್ಯದಲ್ಲಿ ಅಮೆರಿಕದ ಮಿತ್ರ ರಾಷ್ಟ್ರಗಳು ಈಗ ಕೇವಲ ಅಮೆರಿಕದ ಸೈನಿಕ ಶಕ್ತಿಯ ಮೇಲೆ ಅವಲಂಬಿತವಾಗಿರದೆ ತಮ್ಮದೇ ಪ್ರಾದೇಶಿಕ ಭದ್ರತಾ ವ್ಯವಸ್ಥೆಯನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿವೆ. ರಷ್ಯಾಚೀನಾಇರಾನ್: ಹೊಸ ಶಕ್ತಿಸಮೀಕರಣವೇ?

ಈ ಸಂಘರ್ಷ ಮತ್ತೊಂದು ದೊಡ್ಡ ಪ್ರಶ್ನೆ ಎತ್ತಿದೆ.

ಅಮೆರಿಕದ ನೇತೃತ್ವದ ಭದ್ರತಾ ವ್ಯವಸ್ಥೆಗೆ ಪರ್ಯಾಯವಾಗಿ ರಷ್ಯಾ, ಚೀನಾ ಮತ್ತು ಇರಾನ್ ನಡುವಿನ ರಾಜತಾಂತ್ರಿಕ ಹಾಗೂ ಆರ್ಥಿಕ ಸಹಕಾರ ಎಷ್ಟು ಗಟ್ಟಿಯಾಗಲಿದೆ?

ಇದನ್ನುತಕ್ಷಣವೇಹೊಸಎರಡುಬಣಗಳ ಜಗತ್ತು ಎಂದು ಕರೆಯುವುದು ಸರಳೀಕರಣ.

ಆದರೆ ಶಕ್ತಿಯ ಸಮೀಕರಣ ಬದಲಾಗುತ್ತಿದೆ ಎಂಬುದನ್ನು ನಿರಾಕರಿಸಲು ಸಾಧ್ಯವಿಲ್ಲ.

ಚೀನಾಕ್ಕೆ ಇಂಧನ ಬೇಕು. ರಷ್ಯಾಕ್ಕೆ ಏಷ್ಯಾದ ಮಾರುಕಟ್ಟೆ ಬೇಕು. ಇರಾನ್‌ಗೆ ಪಶ್ಚಿಮದ ಒತ್ತಡದ ನಡುವೆ ರಾಜತಾಂತ್ರಿಕ ಮತ್ತು ಆರ್ಥಿಕ ಬೆಂಬಲ ಬೇಕು. ಈ ಮೂರು ಅಗತ್ಯಗಳು ಒಂದೇ ಜಾಗದಲ್ಲಿ ಸೇರುತ್ತವೆ. ಆದರೆ ಭಾರತವೂ ಇಲ್ಲಿ ತನ್ನದೇ ದಾರಿ ಹಿಡಿಯುತ್ತಿದೆ.

ಗಲ್ಫ್ ರಾಷ್ಟ್ರಗಳ ಲೆಕ್ಕಾಚಾರವೂ ಬದಲಾಗುತ್ತಿದೆ

ಸೌದಿ ಅರೇಬಿಯಾ, ಕತಾರ್, ಸಂಯುಕ್ತ ಅರಬ್ ಸಂಸ್ಥಾನ ಸೇರಿದಂತೆ ಗಲ್ಫ್ ರಾಷ್ಟ್ರಗಳು ದಶಕಗಳಿಂದ ಅಮೆರಿಕದ ಭದ್ರತಾ ವ್ಯವಸ್ಥೆಯೊಂದಿಗೆ ಆಳವಾದ ಸಂಬಂಧ ಹೊಂದಿವೆ.

ಆದರೆ ನಿರಂತರ ಯುದ್ಧಗಳು ಅವರಿಗೆ ಒಂದು ಪಾಠ ಕಲಿಸಿವೆ.

ಒಬ್ಬನೇ ಭದ್ರತಾ ಪಾಲುದಾರನ ಮೇಲೆ ಸಂಪೂರ್ಣ ಅವಲಂಬನೆ ಅಪಾಯಕಾರಿ. ಹೀಗಾಗಿ ಈ ರಾಷ್ಟ್ರಗಳು ಅಮೆರಿಕದೊಂದಿಗೆ ಸಂಬಂಧ ಮುಂದುವರಿಸಿಕೊಂಡೇ ಇರಾನ್ ಸೇರಿದಂತೆ ಪ್ರಾದೇಶಿಕ ಶಕ್ತಿಗಳೊಂದಿಗೆ ರಾಜತಾಂತ್ರಿಕ ಸಂಪರ್ಕವನ್ನೂ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಒಮ್ಮೆ ಪ್ರಶ್ನೆ ಹೀಗಿತ್ತು: "ಯಾರು ಅಮೆರಿಕದ ಮಿತ್ರ?"

ಈಗಪ್ರಶ್ನೆಬದಲಾಗಿದೆ:"ಯಾರೊಂದಿಗೆ ಎಷ್ಟು ದೂರ ಸಹಕರಿಸಬೇಕು?" ಇದು ಪಶ್ಚಿಮ ಏಷ್ಯಾದ ಹೊಸ ರಾಜಕೀಯ.

**ಭಾರತಕ್ಕೆ ಸಮತೋಲನವೇ ದೊಡ್ಡ ಆಯುಧ**

**ಭಾರತದ ಪಾಲಿಗೆ ಈ ಸಂಘರ್ಷದಲ್ಲಿ ಅತ್ಯಂತ ಸೂಕ್ಷ್ಮ ಕೆಲಸವೆಂದರೆ ಸಮತೋಲನ.**

**ಇಸ್ರೇಲ್ ಜೊತೆ ರಕ್ಷಣಾ ಮತ್ತು ತಂತ್ರಜ್ಞಾನ ಸಂಬಂಧಗಳಿವೆ.**

**ಇರಾನ್ ಜೊತೆ ಇತಿಹಾಸ, ಚಾಬಹಾರ್ ಬಂದರು ಮತ್ತು ಮಧ್ಯ ಏಷ್ಯಾಕ್ಕೆ ಸಂಪರ್ಕದಂತಹ ಹಿತಾಸಕ್ತಿಗಳಿವೆ.**



**ಗಲ್ಫ್ ರಾಷ್ಟ್ರಗಳೊಂದಿಗೆ ತೈಲ, ವ್ಯಾಪಾರ ಮತ್ತು ಭಾರತೀಯ ವಲಸಿಗರ ಸಂಬಂಧಗಳಿವೆ.**

**ರಷ್ಯಾ ಭಾರತದ ಪ್ರಮುಖ ರಕ್ಷಣಾ ಮತ್ತು ಇಂಧನ ಪಾಲುದಾರ.**

**ಅಮೆರಿಕ ಭಾರತದ ಪ್ರಮುಖ ತಂತ್ರಜ್ಞಾನ, ರಕ್ಷಣಾ ಮತ್ತು ತಂತ್ರಾತ್ಮಕ ಪಾಲುದಾರ.**

**ಹೀಗಾಗಿ ದೆಹಲಿಗೆ ಯಾರನ್ನಾದರೂ ಸಂಪೂರ್ಣವಾಗಿ ಆಯ್ಕೆ ಮಾಡಿಕೊಂಡು ಮತ್ತೊಬ್ಬರನ್ನು ತ್ಯಜಿಸುವುದು ಸುಲಭದ ದಾರಿ ಅಲ್ಲ.**

**ಭಾರತದ ನಿಜವಾದ ತಂತ್ರ ಒಂದೇ, ಎಲ್ಲರೊಂದಿಗೂ ಸಂಪರ್ಕ.**

**ಯಾರ ಮೇಲೂ ಸಂಪೂರ್ಣ ಅವಲಂಬನೆ ಇಲ್ಲ. ಯುದ್ಧದ ಅಂತ್ಯಕ್ಕಿಂತ ಅದರ ನಂತರದ ಜಗತ್ತು ದೊಡ್ಡ ಪ್ರಶ್ನೆ**

**ಈ ಯುದ್ಧ ಯಾವಾಗ ಮುಗಿಯುತ್ತದೆ ಎಂಬುದು ಮುಖ್ಯ. ಆದರೆ ಅದಕ್ಕಿಂತ ದೊಡ್ಡ ಪ್ರಶ್ನೆ: ಯುದ್ಧ ಮುಗಿದ ನಂತರ ಜಗತ್ತು ಹಿಂದಿನಂತೆಯೇ ಉಳಿಯುತ್ತದೆಯೇ?**

**ಹೋರ್ಮುಜ್ ಬಿಕ್ಕಟ್ಟು ಜಾಗತಿಕ ಇಂಧನ ಸರಬರಾಜಿನ ದುರ್ಬಲತೆಯನ್ನು ತೋರಿಸಿದೆ.**

**ಬಾಬ್ ಅಲ್-ಮಂದಬ್‌ನ ಅಸ್ಥಿರತೆ ಜಾಗತಿಕ ಸಾಗಣೆಯ ಮತ್ತೊಂದು ದುರ್ಬಲ ಕೊಂಡಿಯನ್ನು ಬಯಲಿಗೆಳೆದಿದೆ.**

**ಸೌದಿ ಇಂಧನ ಮೂಲಸೌಕರ್ಯಗಳ ಮೇಲಿನ ಹೌತಿ ದಾಳಿಗಳ ಬೆದರಿಕೆ ತೈಲ ಮಾರುಕಟ್ಟೆಗೆ ಹೊಸ ಅಪಾಯದ ಸಂಕೇತ ನೀಡಿದೆ.**

**ಅಮೆರಿಕದ ರಾಜಕೀಯದಲ್ಲಿ ವಿದೇಶಿ ಯುದ್ಧದ ಬೆಲೆ ಮತ್ತೆ ಚರ್ಚೆಯಾಗಿದೆ.**

**ಇಸ್ರೇಲ್‌ನಲ್ಲಿ ಭದ್ರತೆ ಮತ್ತು ರಾಜಕೀಯ ಹೊಣೆಗಾರಿಕೆಯ ಪ್ರಶ್ನೆಗಳು ತೀವ್ರಗೊಂಡಿವೆ.**

**ಗಲ್ಫ್ ರಾಷ್ಟ್ರಗಳು ತಮ್ಮ ಭದ್ರತಾ ಆಯ್ಕೆಗಳನ್ನು ಮರುಪರಿಶೀಲಿಸುತ್ತಿವೆ.**

**ಚೀನಾ ತನ್ನ ಇಂಧನ ಭದ್ರತೆಯನ್ನು ಮತ್ತಷ್ಟು ಬಲಪಡಿಸಬೇಕಾದ ಪರಿಸ್ಥಿತಿಯಲ್ಲಿದೆ.**

**ರಷ್ಯಾ ಏಷ್ಯಾದ ಮಾರುಕಟ್ಟೆಗಳ ಮೇಲೆ ಇನ್ನಷ್ಟು ಅವಲಂಬಿತವಾಗುತ್ತಿದೆ.**

**ಭಾರತ ತನ್ನ ತೈಲ ಮೂಲಗಳನ್ನು ಇನ್ನಷ್ಟು ವೈವಿಧ್ಯಗೊಳಿಸುವ ಅನಿವಾರ್ಯತೆಯನ್ನು ಎದುರಿಸುತ್ತಿದೆ.**

**ಅಂತಿಮವಾಗಿ ಈ ಯುದ್ಧದ ಪರಿಣಾಮ ಕ್ಷಿಪಣಿಗಳ ಸಂಖ್ಯೆಯಲ್ಲಿ ಅಳೆಯಲಾಗುವುದಿಲ್ಲ. ಅದು ಜಗತ್ತಿನ ಶಕ್ತಿಯ ಸಮೀಕರಣದಲ್ಲಿ ಎಷ್ಟು ಬದಲಾವಣೆ ತಂದಿತು ಎಂಬುದರಲ್ಲಿ ಅಳೆಯಬೇಕು.**

**ಕೊನೆಯ ಮಾತು**

**ಪಶ್ಚಿಮ ಏಷ್ಯಾದಲ್ಲಿ ಹೊತ್ತಿಕೊಂಡಿರುವ ಬೆಂಕಿ ಕೇವಲ ಟೆಲ್ ಅವೀವ್, ತೆಹ್ರಾನ್ ಅಥವಾ ಗಾಜಾದ ಪ್ರಶ್ನೆಯಲ್ಲ. ಅದರ ಹೊಗೆ ವಾಷಿಂಗ್ಟನ್‌ನ ರಾಜಕೀಯಕ್ಕೆ ತಲುಪಿದೆ. ಅದರ ಬಿಸಿ ಜಾಗತಿಕ ತೈಲ ಮಾರುಕಟ್ಟೆಗೆ ತಲುಪಿದೆ. ಅದರ ಅಲೆ ದೆಹಲಿಯ ಇಂಧನ ನೀತಿಗೆ ತಲುಪಿದೆ. ಅದರ ಪರಿಣಾಮ ಬೀಜಿಂಗ್‌ನ ಇಂಧನ ಲೆಕ್ಕಾಚಾರದಲ್ಲಿ ಕಾಣುತ್ತಿದೆ. ಅದರ ಒತ್ತಡ ರಿಯಾದ್‌ನ ತೈಲ ಮೂಲ ಸೌಕರ್ಯಗಳವರೆಗೆ ತಲುಪಿದೆ. ಅದರ ನೆರಳು ಬಾಬ್ ಅಲ್-ಮಂದಬ್‌ನ ಸಾಗಣೆಯ ಮೇಲೂ ಬಿದ್ದಿದೆ. ಮತ್ತು ಅದರ ಪರಿಣಾಮ ಮುಂದಿನ ದಶಕದ ಜಾಗತಿಕ ರಾಜತಾಂತ್ರಿಕ ವ್ಯವಸ್ಥೆಯ ಮೇಲೂ ಬೀಳುವ ಸಾಧ್ಯತೆ ಇದೆ.**

ಹೀಗಾಗಿ ಹೋರ್ಮುಜ್‌ನ ಬೀಗ ತೆರೆದುಕೊಳ್ಳುತ್ತದೆಯೇ ಎಂಬುದು ಈಗ ಕೇವಲ ಇರಾನ್‌ನ ಪ್ರಶ್ನೆಯಲ್ಲ.

ಅದು ಅಮೆರಿಕದ ಪ್ರಶ್ನೆ. ಅದು ಇಸ್ರೇಲ್‌ನ ಪ್ರಶ್ನೆ. ಅದು ಸೌದಿ ಅರೇಬಿಯಾದ ಪ್ರಶ್ನೆ. ಅದು ಭಾರತದ ಪ್ರಶ್ನೆ. ಅದು ಚೀನಾದ ಪ್ರಶ್ನೆ. ಮತ್ತು ಕೊನೆಗೆ ಇದು ಜಗತ್ತಿನ ಆರ್ಥಿಕತೆಯ ಪ್ರಶ್ನೆ.

ಯುದ್ಧದ ಕದನಭೂಮಿ ಮಧ್ಯಪ್ರಾಚ್ಯದಲ್ಲಿರಬಹುದು,ಆದರೆ ಅದರ ನಿಜವಾದ ಪರಿಣಾಮದ ಕದನಭೂಮಿ ವಿಶ್ವದ ಮಾರುಕಟ್ಟೆ, ರಾಜತಾಂತ್ರಿಕ ಮೇಜು ಮತ್ತು ಪ್ರತಿಯೊಂದು ದೇಶದ ಜನರ ಬದುಕು.



## ರಂಗ್ ದೇ ವೀರ್2026 ಚಿತ್ರಕಲಾ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟದಲ್ಲಿ 4ನೇ ಸ್ಥಾನ

# ಡಾ.ಅಂಬೇಡ್ಕರ್ ವಸತಿ ಶಾಲೆ, ನೇಸರಗಿ ಹೆಮ್ಮೆಯ ಸಾಧನೆ



■ ಉದಯರಶ್ಮಿ ದಿನಪತ್ರಿಕೆ

ಬೈಲಹೊಂಗಲ: ಹಾನರ್ ಪಾಯಿಂಟ್ ಫೌಂಡೇಶನ್ ವತಿಯಿಂದ 2026ರ ಜುಲೈ 26ರಿಂದ ಆಗಸ್ಟ್ 15ರವರೆಗೆ "ಮಾತೃಭೂಮಿ" ಎಂಬ ವಿಷಯದೊಂದಿಗೆ "ರಂಗ್ ದೇ ವೀರ್8ನೇ ಅಖಿಲ ಭಾರತ ಮುಕ್ತ ಆನ್‌ಲೈನ್ ಚಿತ್ರಕಲಾ ಸ್ಪರ್ಧೆ2026" ಆಯೋಜಿಸಲಾಗಿತ್ತು.

ದೇಶದಾದ್ಯಂತ ವಿವಿಧ ಶಾಲೆಗಳ ಲಕ್ಷಾಂತರ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು.

ಈ ಸ್ಪರ್ಧೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಡಾ. ಬಿ. ಆರ್. ಅಂಬೇಡ್ಕರ್ ವಸತಿ ಶಾಲೆ, ನೇಸರಗಿ (ಎಸ್‌ಸಿ788) ವಿದ್ಯಾರ್ಥಿಗಳು ತಮ್ಮ ಕಲಾತ್ಮಕ ಪ್ರತಿಭೆ ಹಾಗೂ ದೇಶಭಕ್ತಿಯ ಭಾವನೆಯನ್ನು ಚಿತ್ರಗಳ ಮೂಲಕ ಅತ್ಯಂತ ಸುಂದರವಾಗಿ ಅಭಿವ್ಯಕ್ತಪಡಿಸಿದ್ದಾರೆ. ವೀರ ಯೋಧರ ತ್ಯಾಗ, ದೇಶಪ್ರೇಮ ಮತ್ತು ಮಾತೃಭೂಮಿಯ ಮೇಲಿನ ಗೌರವವನ್ನು ಪ್ರತಿಬಿಂಬಿಸುವ ಚಿತ್ರಗಳ ಮೂಲಕ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ರಾಷ್ಟ್ರಮಟ್ಟದಲ್ಲಿ ಪರಿಚಯಿಸಿ ಭಾರತದ ಟಾಪ್5 ಶಾಲೆಗಳ ಡಾ. ಬಿ. ಆರ್. ಅಂಬೇಡ್ಕರ್ ವಸತಿ ಶಾಲೆ, ನೇಸರಗಿ (ಎಸ್‌ಸಿ788) ರಾಷ್ಟ್ರಮಟ್ಟದಲ್ಲಿ 4ನೇ ಸ್ಥಾನ ಪಡೆದು ಕೊಂಡಿಕೊಂಡು ಹೆಮ್ಮೆಯ ಸಾಧನೆಯ ಮೂಲಕ ಶಾಲೆಯ, ತಾಲೂಕಿನ, ಜಿಲ್ಲೆಯ ಹಾಗೂ ರಾಜ್ಯದ ಕೀರ್ತಿ ಹೆಚ್ಚಾಗಿದೆ. ವಿದ್ಯಾರ್ಥಿಗಳಿಗೆ ಚಿತ್ರಕಲೆಯಲ್ಲಿ ಮಾರ್ಗದರ್ಶನ ನೀಡಿದ ಚಿತ್ರಕಲಾ ಶಿಕ್ಷಕರಾದ ಆನಂದ ಕೋಳಿಗುಡ್ಡೆ ಮತ್ತು ಕುಮಾರಿ ಶಶಿತಾ ಕದರಿ ಹಾಗೂ ಸಾಧನೆ ಮಾಡಿದ ಎಲ್ಲಾ ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಬೆಳಗಾವಿಯ ಜಂಟಿ ನಿರ್ದೇಶಕರಾದ ರಾಮನಗೌಡ ಕನ್ನೊಳ್ಳಿ, ವಸತಿ ಶಾಲೆಗಳ ಡಿಸಿಓ ರಾಘವೇಂದ್ರ ಗಂಗರಡ್ಡಿ, ಡಾ. ಬಿ. ಆರ್. ಅಂಬೇಡ್ಕರ್ ವಸತಿ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಸುಜಾತಾ ಬಿ. ಪಾಟೀಲ, ಶಿವಲಿಂಗ ಶೇಟ್ಟೆನವರ, ಶ್ರೀನಾಥ ತಳವಾರ, ಸಚೀನ ಕರಿಹೊಳಿ ಹಾಗೂ ಆನಂದ ನರಗಟ್ಟಿ ಅವರು ವಿದ್ಯಾರ್ಥಿಗಳು ಮತ್ತು ಮಾರ್ಗದರ್ಶಕರನ್ನು ಅಭಿನಂದಿಸಿದ್ದಾರೆ.

# ದೆಹಲಿಯಲ್ಲಿ ಪತ್ರಕರ್ತರ ಮೇಲೆ ಹಲ್ಲೆಗೆ ಕೆಯುಡಬ್ಲ್ಯೂಜೆ ಖಂಡನೆ

■ ಉದಯರಶ್ಮಿ ದಿನಪತ್ರಿಕೆ



ಬೆಂಗಳೂರು: ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆಯ ವರದಿಗೆ ತೆರಳಿದ್ದ ಪತ್ರಕರ್ತರ ಮೇಲೆ ನಡೆದ ಹಲ್ಲೆ ಹಾಗೂ ಮಹಿಳಾ ಪತ್ರಕರ್ತೆಯೊಬ್ಬ–ರಿಗೆ ಪೊಲೀಸ್ ಅಧಿಕಾರಿಯಿಂದ ಲೈಂಗಿಕ ಕಿರುಕುಳ ನೀಡಿರುವ ಘಟನೆಯನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) ತೀವ್ರವಾಗಿ ಖಂಡಿಸಿದೆ. ಪ್ರತಿಭಟನೆಯ ವರದಿಗೆ ತೆರಳಿದ್ದ ಪತ್ರಕರ್ತರ ಮೇಲೆ ಹಲ್ಲೆ ನಡೆಸಿರುವುದು ಹಾಗೂ ಮಹಿಳಾ ಪತ್ರಕರ್ತೆಯೊಂದಿಗೆ ಅನುಚಿತವಾಗಿ ವರ್ತಿಸಿರುವುದು ಖಂಡನೀಯ. ಪತ್ರಕರ್ತರು ತಮ್ಮ ವೃತ್ತಿಪರ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಇಂತಹ ಘಟನೆಗಳು ನಡೆದಿರುವುದು ಆತಂಕಕಾರಿ ಎಂದು ಸಂಘ ಆಕ್ರೋಶ ವ್ಯಕ್ತಪಡಿಸಿದೆ. ಪತ್ರಕರ್ತರ ಮೇಲೆ ಹಲ್ಲೆ ನಡೆಸಿದ ಹಾಗೂ ಮಹಿಳಾ ಪತ್ರಕರ್ತೆಗೆ ಕಿರುಕುಳ ನೀಡಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಪತ್ರಕರ್ತರಿಗೆ ವೃತ್ತಿಪರ ಕರ್ತವ್ಯ ನಿರ್ವಹಿಸಲು ಸುರಕ್ಷಿತ ವಾತಾವರಣ ಕಲ್ಪಿಸಬೇಕು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಆಗ್ರಹಿಸಿದ್ದಾರೆ.

# ಅ.7ರಂದು ವಿಜಯಪುರಕ್ಕೆ ಎನ್‌ಪಿಎಸ್ ಸಂಚಯ ಯಾತ್ರೆ

■ ಉದಯರಶ್ಮಿ ದಿನಪತ್ರಿಕೆ

**ಎನ್‌ಪಿಎಸ್ ಹಾಗೂ ಪಿಂಚಣಿ ಯೋಜನೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಅಭಿಯಾನ**

ವಿಜಯಪುರ: 'ಎನ್‌ಪಿಎಸ್ ದಿವಸ್ 2026' ಅಭಿಯಾನದ ಅಂಗವಾಗಿ ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ ಹಾಗೂ ಆರ್ಥಿಕವಾಗಿ ಸುರಕ್ಷಿತ ಭವಿಷ್ಯಕ್ಕಾಗಿ ಪಿಂಚಣಿ ಯೋಜನೆಯ ಮಹತ್ವ ಕು–ರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಹಮ್ಮಿಕೊಂಡಿರುವ 'ಎನ್‌ಪಿಎಸ್ ಸಂಚಯ ಯಾತ್ರೆ' ಅಕ್ಟೋಬರ್ 7ರಂದು ಜಿಲ್ಲೆಗೆ ಆಗಮಿಸಲಿದೆ. ದೇಶಾದ್ಯಂತ ಪಿಂಚಣಿ ಜಾಗೃತಿ ಮೂಡಿಸುವ ಉದ್ದೇಶದಿಂದ ಕೇಂದ್ರ ಹಣಕಾಸು ಸಚಿವರು ಈಗಾಗಲೇ ನವದೆಹಲಿಯಲ್ಲಿ 'ಎನ್‌ಪಿ–ಎಸ್ ಸಂಚಯಯಾತ್ರೆ'ಗೆಎ ಚಾಲನೆ ನೀಡಿದ್ದಾರೆ. ಕರ್ನಾಟಕದಲ್ಲಿ ಅಕ್ಟೋಬರ್ 1ರಿಂದ 15ರವರೆಗೆ ವಿವಿಧ ನಗರಗಳು ಹಾಗೂ ಜಿಲ್ಲೆಗಳಲ್ಲಿ ಯಾತ್ರೆ ಸಂಚರಿಸಲಿದೆ.

ಜಿಲ್ಲೆಗೆ ಆಗಮಿಸುವ ಸಂದರ್ಭದಲ್ಲಿ ತರಬೇತಿ ಪಡೆದ ಪ್ರತಿನಿಧಿಗಳು 'ಎನ್‌ಪಿಎಸ್ ಸಂಚಯ'ದ ವೈಶಿಷ್ಟ್ಯಗಳು ಮತ್ತು ಪ್ರಯೋಜನಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಲಿದ್ದಾರೆ. ಅಲ್ಲದೆ, ಎನ್‌ಪಿಎಸ್ ಖಾತೆ ತೆರೆಯುವಿಕೆ, ಕೊಡುಗೆ ಸಲ್ಲಿಕೆ ಸೇರಿದಂತೆ ವಿವಿಧ ಪ್ರಕ್ರಿಯೆಗಳ ಕು–ರಿತು ಮಾರ್ಗದರ್ಶನ ನೀಡುವುದರ ಜೊತೆಗೆ ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ. ಪಿಂಚಣಿ ಯೋಜನೆಗೆ ಸಂಬಂಧಿಸಿದ ಮಾಹಿತಿಯುಳ್ಳ ಕರಪತ್ರಗಳಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿ, ಸಾರ್ವಜನಿಕರಿಗೆ ಅಗತ್ಯ ನೆರವು ನೀಡಲು ಕೆನರಾ ಬ್ಯಾಂಕ್‌ನ ಲೀಡ್ ಬ್ಯಾಂಕ್ ಹಾಗೂ ಇತರ ಬ್ಯಾಂಕ್‌ಗಳ ಅಧಿಕಾರಿಗಳು ಸಹ ಉಪಸ್ಥಿತ–ರಿರಲಿದ್ದಾರೆ. ವಿಜಯಪುರ ನಗರ ಹಾಗೂ ಜಿಲ್ಲೆಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯ ವೈಶಿಷ್ಟ್ಯಗಳು ಹಾಗೂ ಪ್ರಯೋಜನಗಳ ಕುರಿತು ಮಾಹಿತಿ ಪಡೆದುಕೊಳ್ಳಬೇಕು. ಭವಿಷ್ಯದ ಆರ್ಥಿಕ ಭದ್ರತೆಗಾಗಿ ಸೂಕ್ತ ಪಿಂಚಣಿ ಯೋಜನೆ ರೂಪಿಸಿಕೊಳ್ಳಲು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮೊ 9449860733 ಸಂಪರ್ಕಿಸುವಂತೆ ಜಿಲ್ಲಾಅಗ್ರಣೀಯ ಬ್ಯಾಕಿನ ವ್ಯವಸ್ಥಾಪಕರಾದ ಸಿದ್ದಯ್ಯ ಬಿ. ಅವರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.



# ಗ್ರಾಮೀಣ ಕ್ರೀಢೆಗಳನ್ನು ಉಳಿಸಿ ಬೆಳೆಸಬೇಕಿದೆ :ಶಾಸಕ ಸವದಿ

■ ಉದಯರಶ್ಮಿ ದಿನಪತ್ರಿಕೆ

ಚಿಮ್ಮಡ: ಆಧುನಿಕತೆಯ ಭರಾಟೆಯಲ್ಲಿ ಗ್ರಾಮೀಣ ಕ್ರೀಡೆಗಳು, ವ್ಯಾಯಾಮ ಕೇಂದ್ರಗಳು ನಶಿಸಿ ಹೋಗುತಿದ್ದು ಸ್ಪರ್ದೆ, ಕ್ರೀಢಾಕೂಟ, ಪಂದ್ಯಗಳನ್ನು ಆಯೋಜಿಸುವ ಮೂಲಕ ಅವುಗಳನ್ನು ಪೋಷಿಸಬೇಕಾಗಿದೆಯಂದು ತೇರದಾಳ ಶಾಸಕ ಸಿದ್ದು ಸವದಿ ಹೇಳಿದರು.

ಗ್ರಾಮದಲ್ಲಿ ಶ್ರೀ ಎಲ್ಲಮ್ಮದೇವಿ ಜಾತ್ರಾ ಮಹೋತ್ಸವದ ನಿಮಿತ್ತ ಸೇವಾ ಸಮೀತಿಯಿಂದ ಹಮ್ಮಿಕೊಳ್ಳಲಾಗಿದ್ದ ರಾಜ್ಯ ಮಟ್ಟದ ಮುಕ್ತ ತೆರಬಂಡಿ ಸ್ಪರ್ದೆಯ ಉದ್ಘಾಟಣೆ ನೆರವೇರಿಸಿ ಮಾತನಾಡಿದ ಅವರು, ಹಿಂದಿನ ಕಾಲದಲ್ಲಿ ಹಿರಿಯರು ತಮ್ಮ ಮಕ್ಕಳಿಗೆ ಪೋಷಕಾಂಶಗಳುಳ್ಳ ಆಹಾರವನ್ನು ತಿನ್ನಿಸಿ ಸದೃಢರನ್ನಾಗಿ ಬೆಳೆಸುತಿದ್ದರು ಇಂದಿನ ಪೀಳಿಗೆ ಬರೀ ಹೈಬ್ರಿಡ್ ಆಹಾರ ತಿನ್ನುವ ಮೂಲಕ ಅನಾರೋಗ್ಯ ಪೀಡಿತರಾಗುತಿದ್ದು ಇಂತಹ ಸ್ಪರ್ದೆಗಳನ್ನು ಆಯೋಜಿಸಿದಲ್ಲಿ ಅದರಲ್ಲಿ ಭಾಗವಹಿಸುವ ಇಚ್ಚೆಯಿಂದ ಯುವ ಪೀಳಿಗೆ ಮಾತ್ರವಲ್ಲ ನಮ್ಮ ಜಾನುವಾರುಗಳನ್ನು ಕೂಡ ಸದೃಢವಾಗಿ ಬೆಳೆಸಬಹುದು ಎಂದರು. ಕಾರ್ಯಕ್ರಮದ ಸಾನಿಧ್ಯವಹಿಸಿದ ಶ್ರೀ ಪ್ರಭು ಮಹಾಸ್ವಾಮಿಗಳು ಮಾತನಾಡಿ, ಹಳ್ಳಿಗಳಿಗೆ ಮಾತ್ರ ಸಿಮಿತವಾಗಿರುವ ಪಾರಂಪರಿಕ ದೇಶಿ ಕ್ರೀಢೆಗಳ ಆಸಕ್ತಿಯನ್ನು ನಗರ ಪಟ್ಟಣಗಳ ಯುವ ಪೀಳಿಗೆಯಲ್ಲಿ ಬೆಳೆಸಬೇಕಾಗಿದೆ ಎಂದರು ಕಾರ್ಯಕ್ರಮದ ಸಾನಿಧ್ಯವನ್ನು ರಘುನಾಥ ಪ್ರೀಯ ಸಾಧು ಮಹಾರಾಜರ ಮಠದ ಶ್ರೀ ಜನಾಧನ ಮಹಾರಾಜರು ವಹಿಸಿದ್ದರು, ಅಧ್ಯಕ್ಷತೆಯನ್ನು ತಾ.ಪಂ. ಮಾಜಿ ಉಪಾಧ್ಯಕ್ಷ ಪ್ರಭು ಮುಧೋಳವಹಿಸಿದ್ದರು, ಯುವ ಮುಖಂಡ ಅವ್ವನಪ್ಪ ಮುಗಳಖೋಡ, ನಾಗಪ್ಪ ಆಲಕನೂರ, ಘಟಿಗೆಪ್ಪ ಜಾಂಗನೂರ, ಮಾರೂತಿ ಮಮದಾಪೂರ, ಲಾಳೆಸಾಬ ಶಿರಹಟ್ಟಿ ಸೇರಿದಂತೆ ಹಲವಾರು ಜನ ಪ್ರಮುಖರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿಜೇತ ತಂಡಗಳು; ಪ್ರಥಮ ಬಹುಮಾನ 40 ಸಾವಿರ ರೂ. ಗಳನ್ನು ಹೊಂದಿರುವ ಈ ತೆರಬಂಡಿ ಸ್ಪರ್ದೆಯಲ್ಲಿ ಒಟ್ಟು 11 ಬಹುಮಾನಗಳನ್ನು ಆಯೋಜಿಸಲಾಗಿತ್ತು ಅದರಲ್ಲಿ ಪ್ರಥಮ ಬಹುಮಾನ ಕಮಲದಿನ್ನಿಯ ಮಾರುತೇಶ್ವರ ಪಡೆದುಕೊಂಡರು, 2ನೇಯ ಬಹುಮಾನ ಬಬಲಾದಿಯ ಸಿದ್ದರಾಮೇಶ್ವರ 3ನೇಯ ಬಹುಮಾನ, ಢವಳೇಶ್ವರದ ದೇವರಸಿ ಉಳ್ಳಾಗಡ್ಡಿ ಸೇರಿದಂತೆ ಒಟ್ಟು ಹನ್ನೊಂದು ತಂಡಗಳಿಗೆ ಬಹುಮಾನ ನೀಡಲಾಯಿತು.

# ಇದಿನಿಂದ ಸಿಯುಕೆಯಲ್ಲಿ "ಕನ್ನಡ ವಿಮರ್ಶೆಯ ತಾತ್ವೀಕರಣ" ವಿಷಯ ಕುರಿತು ಮೂರು ದಿನಗಳ ಕಮ್ಮಟ



ಕಲಬುರಗಿ:"ಕನ್ನಡ ವಿಮರ್ಶೆಯ ತಾತ್ವೀಕರಣ"– ಇಂತಹ ಗಂಭೀರ ಹಾಗೂ ಮಹತ್ವದ ವಿಷಯ ಕುರಿತು ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕಡಗಂಚಿಯ ಕೇಂದ್ರಿಯ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಸಹಯೋಗದಲ್ಲಿ ಅ.7, 8, 9 ರಂದು ಮೂರು ದಿನಗಳ ಕಾಲ ಕಲಬುರಗಿಯ ಕೇಂದ್ರಿಯ ವಿವಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕಮ್ಮಟ ಏರ್ಪಡಿಸಲಾಗಿದೆ.

ನಾಡಿನ ಶ್ರೇಷ್ಠ ಸಾಹಿತ್ಯ ಚಿಂತಕರು ಭಾಗವಹಿಸಿ ಪ್ರಬಂಧ ಮಂಡಿಸಲಿದ್ದಾರೆ. ಕಮ್ಮಟದ ನಿರ್ದೇಶಕರಾಗಿ ಡಾ.ಬಸವರಾಜ ಕೋಡಗುಂಟಿ ಹಾಗೂ ಡಾ.ರಾಮಲಿಂಗಪ್ಪ ಬೇಗೂರು ಈ ಕಮ್ಮಟ ಸಂಘಟಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಎಲ್.ಎನ್.ಮುಕುಂದರಾಜ್ ಅವರು ಅ.7 ರಂದು ಮುಂಜಾನೆ ಹತ್ತು ಗಂಟೆಗೆ ಈ ಕಮ್ಮಟ ಉದ್ಘಾಟಿಸಲಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾದ ಡಾ.ಸಿದ್ಧರಾಮ ಹೊನ್ಕಲ್ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ. ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾದ ಡಾ.ಶಿವಗಂಗಾ ರುಮ್ಮಾ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಮೂರು ದಿನಗಳ ಕಾಲ ನಾಡಿನ ಹೆಸರಾಂತ ವಿದ್ವಾಂಸರಾದ ಓಎಲ್ ಎನ್, ಡಾ.ರಾಜೇಂದ್ರ ಚೆನ್ನಿ, ಡಾ.ಸತ್ಯನಾಥ್, ಡಾ.ತಾರಕೇಶ್ವರ್, ಪ್ರೊ. ಎಸ್.ಜಿ. ಸಿದ್ಧರಾಮಯ್ಯ,ಎಂ.ಎಸ್. ಆಶಾದೇವಿ ಒಳಗೊಂಡಂತೆ ಇತ್ಯಾದಿ ವಿದ್ವಾಂಸರು ವಿಷಯ ಕುರಿತು ಪ್ರಬಂಧ ಮಂಡಿಸಲಿದ್ದಾರೆ. ಅ.9 ರಂದು ಸಂಜೆ ಸಮಾರೋಪ ಸಮಾರಂಭ ನಡೆಯಲಿದೆ. ಕಲ್ಯಾಣ ಕರ್ನಾಟಕದ ಸಾಹಿತ್ಯ ಆಸಕ್ತರು ಇದರ ಸದುಪಯೋಗ ಪಡೆಯಬೇಕು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಎಲ್. ಎನ್. ಕರಿಯಪ್ಪನವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ರಾತ್ರಿ ವೇಳೆ ಕಾರಿನಲ್ಲಿ ಬಂದು ನಾಲ್ಕು ಕುರಿ ಕಳವು

ಕಲಬುರಗಿ:ಕಳ್ಳರು ರಾತ್ರಿ ವೇಳೆ ಕಾರಿನಲ್ಲಿ ಬಂದು ನಾಲ್ಕು ಕುರಿಗಳನ್ನು ಕಳವು ಮಾಡಿಕೊಂಡು ಹೋಗಿರುವ ಘಟನೆ ಫರಹತಾಬಾದ ಪೊಲೀಸ್ ಠಾಣೆ ವ್ಯಾಪ್ತಿಯ ತಿಳಗೂಳ್ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮಹ್ಮದ್ ಪಟೇಲ್ ಎಂಬುವವರ ಕುರಿದೊಡ್ಡಿಯಲ್ಲಿನ ಸುಮಾರು 58 ಸಾವಿರ ರೂ. ಮೌಲ್ಯದ 4 ಕುರಿಗಳನ್ನು ಕಳವು ಮಾಡಲಾಗಿದೆ.

ಅವರು ಈ ಸಂಬಂಧ ಫರಹತಾಬಾದ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

# ವಿಶೇಷಚೇತನರ ವಿವಿಧ ಯೋಜನೆಗಳಿಗೆ ಆನ್‌ಲೈನ್ ಅರ್ಜಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಿಶೇಷಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ 2026–27ನೇ ಸಾಲಿನ 14 ಫಲಾನುಭವಿ ಆಧಾರಿತ ಯೋಜನೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅಸಾಧಾರಣ ಸಾಧನೆ, ವೈದ್ಯಕೀಯ ಪರಿಹಾರ ನಿಧಿ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ, ನಿರುದ್ಯೋಗ ಭತ್ಯೆ, ಶಿಶುಪಾಲನಾ ಭತ್ಯೆ, ಸಾಧನ ಸಲಕರಣೆ, ಪ್ರತಿಭೆ, ಟಾಕಿಂಗ್ ಲ್ಯಾಪ್‌ಟಾಪ್, ಬ್ರೈಲ್ ಕಿಟ್, ಯಂತ್ರಚಾಲಿತ ದ್ವಿಚಕ್ರ ವಾಹನ, ಹೊಲಿಗೆ ಯಂತ್ರ, ಮರಣ ಪರಿಹಾರ ನಿಧಿ ಹಾಗೂ ವೀಲ್‌ಚೇರ್ ಸೇರಿದಂತೆ ವಿವಿಧ ಯೋಜನೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಹರು ಅ.30,ರೊಳಗೆ https://sevaone.karnataka.gov.in ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬಹುದು.ಹಿಂದಿನ ಸಾಲಿನಲ್ಲಿ ಅರ್ಜಿ ಸಲ್ಲಿಸಿ ಸೌಲಭ್ಯ ಪಡೆಯದವರು ಸಹ ಮತ್ತೊಮ್ಮೆ ಅರ್ಜಿ ಸಲ್ಲಿಸಬಹುದು. ಸಲ್ಲಿಸಿದ ಅರ್ಜಿಗೆ ಅಡಕಗೊಳಿಸಿರುವ ಅಗತ್ಯ ದಾಖಲೆಗಳನ್ನು ಸಂಬಂಧಪಟ್ಟ ತಾಲೂಕು ಪಂಚಾಯಿತಿಯ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ವಿಜಯಪುರ ಜಿಲ್ಲಾ ಸಂಯೋಜಕಿ ಪ್ರತಿಭಾ ಮೊ:9606151149, ವಿಜಯಪುರ ತಾಲೂಕು ಪಂಚಾಯಿತಿಯ ರವಿ ರಾಠೋಡ ಮೊ:9035553337, ಇಂಡಿ ಪರಶುರಾಮ ಭೋಸಲೆ ಮೊ:9972441464, ಸಿಂದಗಿ ತಾಲೂಕು ಪಂಚಾಯಿತಿಯ ಮುತ್ತುರಾಜ ಸಾತಿಹಾಳ ಮೊ: 9980019635, ಮುದ್ದೇಬಿಹಾಳ ತಾಲೂಕು ಪಂಚಾಯಿತಿಯ ಎಸ್.ಕೆ. ಘಾಟಿ ಮೊ:9740682979 ಹಾಗೂ ಬಸವನ ಬಾಗೇವಾಡಿ ತಾಲೂಕು ಪಂಚಾಯಿತಿಯ ಶೀವಲೀಲಾ ಬಿರಾದಾರ/ಮೊ:8722135660 ಅವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ಪ್ರಕಟಣೆ ತಿಳಿಸಿದೆ.

## ಕಲಾವಿದರಿಗೆ ಪ್ರೋತ್ಸಾಹ, ತರಬೇತಿ ಕೇಂದ್ರ ಹಾಗೂ ರಂಗಾಯಣ ನಿರ್ಮಾಣಕ್ಕೆ ಆಗ್ರಹ

# ಬಯಲಾಟವನ್ನು ನಾಡಕಲೆಯಾಗಿ ಘೋಷಿಸಿ :ಮೇತ್ರಿ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ನಾಡಿನ ಸಂಪ್ರದಾಯ, ಸಂಸ್ಕೃತಿ ಮತ್ತು ಸೌಹಾರ್ದತೆಯನ್ನು ಪಸರಿಸುತ್ತ ಬಂದಿರುವ ಬಯಲಾಟ ಕಲೆಯನ್ನು ಸರ್ಕಾರ ರಾಜ್ಯದ ನಾಡಕಲೆಯಾಗಿ ಘೋಷಿಸಿ, ಕಲಾವಿದರಿಗೆ ಸೂಕ್ತ ಪ್ರೋತ್ಸಾಹ ಹಾಗೂ ಮೂಲಸೌಕರ್ಯ ಒದಗಿಸಬೇಕು ಎಂದು ಬಯಲಾಟ ಕಲಾವಿದರ ವಿಜಯಪುರ ಜಿಲ್ಲಾ ಅಧ್ಯಕ್ಷ ಎಸ್.ಎಲ್. ಮೇತ್ರಿ ಆಗ್ರಹಿಸಿದರು.

ಝಳಕಿ ಗ್ರಾಮದ ಪ್ರವಾಸಿ ಮಂದಿರದಲ್ಲಿ ಇಂಡಿ ಮತ್ತು ಚಡಚಣ ತಾಲೂಕುಗಳ ಬಯಲಾಟ ಕಲಾವಿದರ ವತಿಯಿಂದ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಬಯಲಾಟ ಕಲಾವಿದರ ಬದುಕು ಇಂದು ಅಂಚಿನ ಸ್ಥಿತಿಯಲ್ಲಿದೆ. ಹಲವು ತಲೆಮಾರುಗಳಿಂದ ಈ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ಕಲಾವಿದ–ರಿಗೆ ಸರ್ಕಾರದಿಂದ ನಿರೀಕ್ಷಿತ ಮಟ್ಟದ ಪ್ರೋತ್ಸಾಹ ದೊರೆಯುತ್ತಿಲ್ಲ. ಹೀಗಾಗಿ ಬಯಲಾಟ ಕಲೆಯ ಉಳಿವು ಮತ್ತು ಬೆಳವಣಿಗೆಗೆ ಸರ್ಕಾರ ವಿಶೇಷ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು.

2017ರಲ್ಲಿ ಬಾಗಲಕೋಟೆಯಲ್ಲಿ ಬಯಲಾಟ ಅಕಾಡೆಮಿ ಸ್ಥಾಪನೆಯಾಗಿದ್ದು, ಅಕಾಡೆಮಿಗೆ ಸೂಕ್ತ ಅಧಿಕಾರಿಗಳನ್ನು ನೇಮಿಸಿ, ಅದರ ಚಟುವಟಿಕೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಡೆಸಬೇಕು. ಬಯಲಾಟ ಕಲಾವಿದರಿಗೆ ತರಬೇತಿ, ಪ್ರದರ್ಶನ ಹಾಗೂ ಕಲಾ ಚಟುವಟಿಕೆಗಳಿಗೆ ಅಗತ್ಯ ವೇದಿಕೆ ಕಲ್ಪಿಸಬೇಕು. ಈ ಕುರಿತು ಜಿಲ್ಲಾ ಸಚಿವ ಎಂ.ಬಿ. ಪಾಟೀಲ, ಶಿವಾನಂದ ಪಾಟೀಲ ಹಾಗೂ ಶಾಸಕ ಯಶವಂತರಾಯಗೌಡ ಪಾಟೀಲ ಅವರು ಸರ್ಕಾರದ ಗಮನ ಸೆಳೆದು ಕ್ರಮ ಕೈಗೊಳ್ಳಬೇಕು ಎಂದು ಮೇತ್ರಿ ಮನವಿ ಮಾಡಿದರು.



"ರಾಜ್ಯ ಕಲೆಯಾಗಿ ಘೋಷಿಸಲು ಆಗ್ರಹ"

ರಾಜ್ಯ ಬಯಲಾಟ ಗೌರವ ಅಧ್ಯಕ್ಷ ಶಿವಣ್ಣ ಬಿರಾದಾರ ಮಾತನಾಡಿ, ಬಯಲಾಟ ಕಲಾವಿದರನ್ನು ಕಡೆಗಣಿಸದೆ, ನಾಡಿನ ಸಂಸ್ಕೃತಿಯನ್ನು ಜೀವಂತವಾಗಿ–ರಿಸಿರುವ ಕಲಾವಿದರಿಗೆ ಸರ್ಕಾರ ಮಾನ್ಯತೆ ನೀಡಬೇಕು. ಬಯಲಾಟವನ್ನು ರಾಜ್ಯದ ನಾಡಕಲೆಯಾಗಿ ಘೋಷಿಸಿ, ಕಲೆಯ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ವಿಶೇಷ ಯೋಜನೆ ರೂಪಿಸಬೇಕು ಎಂದು ಆಗ್ರಹಿಸಿದರು.

ಬಯಲಾಟ ಕಲೆ ಕೇವಲ ಒಂದು ಜಿಲ್ಲೆಯ ಅಥವಾ ಒಂದು ಪ್ರದೇಶದ ಕಲೆಯಲ್ಲ. ನಾಡಿನ ವಿವಿಧ ಭಾಗಗಳಲ್ಲಿ ತನ್ನದೇ ಆದ ವೈಶಿಷ್ಟ್ಯಗಳೊಂದಿಗೆ ಬೆಳೆದುಬಂದಿರುವ ಈ ಕಲೆಯನ್ನು ದೇಶದಾದ್ಯಂತ ಪರಿಚಯಿಸುವ ಪ್ರಯತ್ನವಾಗಬೇಕು. ಸರ್ಕಾರದ ಮುಖ್ಯಸ್ಥರು ಹಾಗೂ ಅಧಿಕಾರಿಗಳು ಬಯಲಾಟ ಕಲೆಯ ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ಜಿಲ್ಲಾ ಕಾರ್ಯದರ್ಶಿ ಕಾಸುಗೌಡ ಪಾಟೀಲ ಮಾತನಾಡಿ, ಬಯಲಾಟವು ನಮ್ಮ ಸಾಂಪ್ರದಾಯಿಕ ಕಲೆಯಾಗಿದ್ದರೂ ಇತ್ತೀಚಿನ ದಿನಗಳಲ್ಲಿ ಕಲಾವಿದರಿಗೆ ಸೂಕ್ತ ಪ್ರೋತ್ಸಾಹ ದೊರೆಯುತ್ತಿಲ್ಲ. ಆಧುನಿಕ ಮನರಂಜನಾ ಮಾಧ್ಯಮಗಳ ನಡುವೆ ಸಾಂಪ್ರದಾಯಿಕ ಕಲೆಗಳು ಹಿನ್ನಡೆ ಅನುಭವಿಸುತ್ತಿವೆ. ಯುವಜನತೆ ನಮ್ಮ ಜಾನಪದ ಮತ್ತು ಸಾಂಪ್ರದಾಯಿಕ ಕಲೆಗಳಿಂದ ದೂರವಾಗುತ್ತಿರುವ ಪರಿಸ್ಥಿತಿಯಲ್ಲಿ ಸರ್ಕಾರ ಬಯಲಾಟಕ್ಕೆ ವಿಶೇಷ ಆದ್ಯತೆ ನೀಡಬೇಕು ಎಂದು ಹೇಳಿದರು.

ಬಯಲಾಟವನ್ನು ನಾಡಕಲೆಯಾಗಿ ಘೋಷಿಸಿ, ಕಲಾವಿದರ ಬದುಕಿಗೆ ಭದ್ರತೆ ಒದಗಿಸುವ ಜತೆಗೆ ಕಲೆಯ ಮುಂದಿನ ಪೀಳಿಗೆಗೆ ತರಬೇತಿ ನೀಡಲು ಶಾಶ್ವತ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ತಮ್ಮರಾಯ ವಾಲಿಕಾರ, ದ್ಯಾಮಗೊಂಡ ಗೌಡನೂರ, ಸಂಗಪ್ಪ ಬಿರಾದಾರ, ಗಂಗಾಧರ ಮಡಿವಾಳ, ಸುರೇಶ ದೊತ್ರೆ, ಗುರುಬಾಳ ಭಾವಿಕಟ್ಟಿ, ಭೀರಣ್ಣ ಕಾಗರ, ಕವಿತಾ ಅಳ್ಳೊಳ್ಳಿ, ಜಯಶ್ರೀ ಬಡಿಗೇರ, ಭಾರತಿ ಚೌಧರಿ, ಗಜರಾಬಾಯಿ ಕಟ್ಟಿಮನಿ, ಶಿವಣ್ಣ ಬಿರಾದಾರ ಸೇರಿದಂತೆ ಚಡಚಣ ಹಾಗೂ ಇಂಡಿ ತಾಲೂಕುಗಳ ಬಯಲಾಟ ಕಲಾವಿದರು ಉಪಸ್ಥಿತರಿದ್ದರು.

# ಪೂರ್ವಭಾವಿ ಸಭೆ: ಕನ್ನಡಹಬ್ಬ ಅದ್ದೂರಿ ಆಚರಣೆಗೆ ನಿರ್ಧಾರ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಕನ್ನಡ ನಾಡು, ನುಡಿ, ಜಲ ಹಾಗೂ ಕನ್ನಡ ಸಂಸ್ಕೃತಿಯ ವೈಭವವನ್ನು ಸಾರುವ ಉದ್ದೇಶದಿಂದ ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣಶೆಟ್ಟಿ ಬಣ) ಹಾಗೂ ಎ.ಆರ್.ಕೆ ಫೌಂಡೇಶನ್ ವತಿಯಿಂದ ನವೆಂಬರ್ 2 ರಂದು ಕನ್ನಡಹಬ್ಬ ಅದ್ದೂರಿ ಆಚರಣೆಗೆ ನಿರ್ಧರಿಸಲಾಗಿದೆ ಎಂದು ಕರವೇ ಜಿಲ್ಲಾಧ್ಯಕ್ಷ ಶ್ರೀಶೈಲ ಮುಳಜಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ಜರುಗಿದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ನ.2 ಸೋಮವಾರ ಅಂಬೇಡ್ಕರ್ ವೃತ್ತದಿಂದ ಮೊಹರೆ ಹಣಮಂತ್ರಾಯ ವೃತ್ತದ ಮಾರ್ಗವಾಗಿ ಟಿಪ್ಪುಸುಲ್ತಾನ್ ವೃತ್ತದವರೆಗೆ ಜಾನಪದ ಕಲಾತಂಡಗಳ ಮೆರವಣಿಗೆ ಮೂಲಕ ವೇದಿಕೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚ–ರಿಸಲಾಗುವುದು. ಕನ್ನಡ ರಾಜ್ಯೋತ್ಸವ ಕೇವಲ ಒಂದು ದಿನದ ಆಚರಣೆಯಾಗದೆ, ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಹಾಗೂ ಜಾನಪದ ಪರಂಪರೆಯ ಬಗ್ಗೆ ಅಭಿಮಾನ ಬೆಳೆಸುವ ವೇದಿಕೆಯಾಗಬೇಕು. ಈ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಕರವೇ ತಾಲ್ಲೂಕು ಅಧ್ಯಕ್ಷ ರಹೀಮಾನ ಕನಕಲ್ ಮಾತನಾಡಿ, ನ.2ರಂದು ರಾಜ್ಯೋತ್ಸವದ ಪ್ರಯುಕ್ತ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರ ಸನ್ಮಾನ ಹಾಗೂ ಪ್ರಶಸ್ತಿ ಪ್ರದಾನ ನಡೆಯಲಿದೆ. ಕಾರ್ಯಕ್ರಮದಲ್ಲಿ ರಾಜ–ಕೀಯ ಗಣ್ಯರು, ಸಾಹಿತಿಗಳು, ಕಲಾವಿದರು, ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದರು. ಪಟ್ಟಣದ ಪರದೇಶಿಮಠಶ್ರೀ, ಸಿಂದಗಿ ಪಿಎಲ್ ಡಿ ಬ್ಯಾಂಕ್ ಉಪಾಧ್ಯಕ್ಷ ಸಿದ್ಧಾರ್ಥ್ ರೂಗಿ ಹಾಗೂ ರೈತ ಸಂಘದ ಜಿಲ್ಲಾಧ್ಯಕ್ಷ ಸಿದ್ದನಗೌಡ ಜಲಪೂರ ಮಾತನಾಡಿ, ಕನ್ನಡದ ಕಾರ್ಯಕ್ರಮದಲ್ಲಿ ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಕರವೇ ಗೌರವಾಧ್ಯಕ್ಷ ಸಾಹೇಬಗೌಡ ಉತ್ನಾಳ, ಪದಾಧಿಕಾರಿಗಳಾದ ಅಮೀದ ಮುಲ್ಲಾ, ಅಬೂಬಕರ್ ಯಲಗಾರ, ಮಲ್ಲಿಕಾರ್ಜುನ ಬಿರಾದಾರ, ನಬಿಲಾಲ ಚಿಕ್ಕಸಿಂದಗಿ, ಗುರುಪಾದ ಮಣೂರ ಇದ್ದರು.



# ಸ್ವಚ್ಛ ಗ್ರಾಮ ನಿರ್ಮಾಣಕ್ಕೆ ಸಂಕಲ್ಪ ;ಸುರೇಶ ಶೇಡಶ್ಯಾಳ

■ ಉದಯರಶ್ಮಿ ದಿನಪತ್ರಿಕೆ

ತಿಕೋಟಾ: ಸ್ವಚ್ಛ ಹಾಗೂ ಆರೋಗ್ಯಕರ ಪರಿಸರ ನಿರ್ಮಾಣಕ್ಕೆ ಪ್ರತಿಯೊಬ್ಬ ನಾಗರಿಕನ ಸಹಭಾಗಿತ್ವ ಅಗತ್ಯವಾಗಿದ್ದು, ಸ್ವಚ್ಛತೆಯನ್ನು ಕೇವಲ ಅಭಿಯಾನಕ್ಕೆ ಸೀಮಿತಗೊಳಿಸದೆ ಜೀವನದ ಅವಿಭಾಜ್ಯ ಭಾಗವನ್ನಾಗಿಸಿಕೊಳ್ಳಬೇಕು ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸುರೇಶ ಶಡಶ್ಯಾಳ ಹೇಳಿದರು.

ತಾಲ್ಲೂಕಿನ ಕನಮಡಿ ಗ್ರಾಮದಲ್ಲಿ ರವಿವಾರ ಕರ್ನಾಟಕ ಸರ್ಕಾರದ ಸ್ವಚ್ಛತಾ ಅಭಿಯಾನ 2026ರ ಅಂಗವಾಗಿ ಹಾಗೂ ಸಚಿವ ಎಂ.ಬಿ. ಪಾಟೀಲ ಅವರ ಸದಾಶಯದಂತೆ ಕನಮಡಿ ಗ್ರಾಮ ಪಂಚಾಯಿತಿ ವತಿಯಿಂದ ಆಯೋಜಿಸಿದ್ದ 'ಸ್ವಚ್ಛತೆಯೆಡೆಗೆ ಹಳ್ಳಿಯ ನಡಿಗೆ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕ್ರೀಡಾ ಮತ್ತು ಯುವಜನ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ್ ಧೈವಾಡಿ ಮಾತನಾಡಿ ಸ್ವಚ್ಛತೆ ಎಂಬುದು ಕೇವಲ ಕಸವನ್ನು ಗುಡಿಸಿ ಸ್ವಚ್ಛಗೊಳಿಸುವ ಕಾರ್ಯವಲ್ಲ. ಸ್ವಚ್ಛತೆಯ ಬಗ್ಗೆ ಜನರಲ್ಲಿ ಜವಾಬ್ದಾರಿ ಮತ್ತು ಜಾಗೃತಿ ಮೂಡಿಸುವ ಸಾಮಾಜಿಕ ಚಳವಳಿಯಾಗಿದೆ. ನಮ್ಮ ಮನೆ ಸ್ವಚ್ಛವಾಗಿರುವಷ್ಟೇ ನಮ್ಮ ಗ್ರಾಮವೂ ಸ್ವಚ್ಛವಾಗಿರಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕದಿರುವುದು, ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡುವುದು ಹಾಗೂ ಪರಿಸರವನ್ನು ಸಂರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಹೇಳಿದರು. ಕಾರ್ಯಕ್ರಮದ ಅಂಗವಾಗಿ ಆರು ದಿನಗಳ ಕಾಲ ಗ್ರಾಮದಲ್ಲಿ ವಿಶೇಷ ಸ್ವಚ್ಛತಾ ಕಾರ್ಯ ಹಮ್ಮಿಕೊಳ್ಳಲಾಗಿದೆ. ಗ್ರಾಮದ ಪ್ರಮುಖ ರಸ್ತೆಗಳು,



ಸಾರ್ವಜನಿಕ ಸ್ಥಳಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛಗೊಳಿಸುವುದರ ಜತೆಗೆ ವಿವಿಧೆಡೆ ಸಸಿಗಳನ್ನು ನೆಟ್ಟು, ಪರಿಸರ ಸಂರಕ್ಷಣೆಯ ಕುರಿತು ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಲಾಯಿತು.

ಗ್ರಾಮದ ಪ್ರತಿಯೊಬ್ಬರೂ ಸ್ವಚ್ಛತಾ ಕಾರ್ಯದಲ್ಲಿ ಕೈಜೋಡಿಸುವ ಮೂಲಕ ನನ್ನ ಮನೆ, ನನ್ನ ಬೀದಿ, ನನ್ನ ಗ್ರಾಮ ಸ್ವಚ್ಛ ಎಂಬ ಮನೋಭಾವ ಬೆಳೆಸಿಕೊಳ್ಳಬೇಕು. ಸರ್ಕಾರದ ಯೋಜನೆಗಳು ಯಶಸ್ವಿಯಾಗಬೇಕಾದರೆ ಸಾರ್ವಜನಿಕರ ಸಹಭಾಗಿತ್ವ ಅತ್ಯಗತ್ಯ ಎಂಬ ಸಂದೇಶವನ್ನು ಕಾರ್ಯಕ್ರಮ ಸಾರಿತು.

ಕನಮಡಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರೇಣುಕಾ ಸೋಲಾಪುರ, ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಪ್ರಶಾಂತ್ ಪಾಟೀಲ, ನೌಕರರ ಸಂಘದ ತಾಲ್ಲೂಕ ಅಧ್ಯಕ್ಷ ಚೆನ್ನಯ್ಯ ಮಠಪತಿ, ಗ್ರಾಮ ಪಂಚಾಯಿತಿ ಸದಸ್ಯರು, ಗ್ರಾಮದ ಹಿರಿಯ ನಾಗರಿಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR